ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜನವರಿ 21, 2022

ಸಂಪುಟ : 48 ಸಂಚಿಕೆ : 251 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com

## ನಿಗಮಗಳಿಗೆ ಹೊಸಬರು

**ಸೋಮವಾರ ಆದೇಶ ಸಂಭವ**

ಬೆಂಗಳೂರು, ಜ.20- ಯಡಿಯೂರಪ್ಪ ಆಡಳಿತದಲ್ಲಿ ಪಕ್ಷದ ಕಾರ್ಯ ಕರ್ತರಿಗೆ ನೀಡಲಾಗಿದ್ದ ನಿಗಮ, ಮಂಡಳಿ ಅಧ್ಯಕ್ಷ ಹಾಗೂ ಸದಸ್ಯರ ನೇಮಕಾತಿ ರದ್ದುಪಡಿಸಿ ಹೊಸಬರಿಗೆ ಅವಕಾಶ ನೀಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿರ್ಧರಿಸಿದ್ದಾರೆ.

45 ನಿಗಮ ಮತ್ತು ಮಂಡಳಿಗಳಿಗೆ ಬರುವ ಸೋಮವಾರ ಹೊಸಬರಿಗೆ ಅಧ್ಯಕ್ಷ ಹಾಗೂ ಸದಸ್ಯರ ನೇಮಕಾತಿ ಆದೇಶ ಹೊರ ಬೀಳಲಿದೆ.

ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರ ಅಧ್ಯಕ್ಷತೆಯಲ್ಲಿ ನಿನ್ನೆ ರಾತ್ರಿ ಸೇರಿದ್ದ ನಿಗಮ ಮತ್ತು ಮಂಡಳಿ ಗಳ ನೇಮಕಾತಿ ಸಮಿತಿ ಈ ತೀರ್ಮಾನ ಕೈಗೊಂಡಿದ್ದು, ಪಕ್ಷದ ಆದೇಶವನ್ನು ಮುಖ್ಯ ಮಂತ್ರಿಯವರು ಜಾರಿಗೆ ತರುತ್ತಿದ್ದಾರೆ.

ಸಮಿತಿಯಲ್ಲಿ ಕಟೀಲ್ ಅವರಲ್ಲದೆ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಅರುಣ್‌ಕುಮಾರ್, ಪ್ರಧಾನ ಕಾರ್ಯ ದರ್ಶಿ ನಿರ್ಮಲ್‌ಕುಮಾರ್ ಸೂರಣ ಹಾಗೂ ಕಂದಾಯ ಸಚಿವ ಆರ್. ಅಶೋಕ್ ನಿಗಮಗಳಿಗೆ ಹೊಸಬರ ನೇಮಕಾತಿ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ.

ಸದ್ಯಕ್ಕೆ ಪಕ್ಷದ ಶಾಸಕರಿಗೆ ನೀಡಲಾಗಿ ರುವ ನಿಗಮ ಮತ್ತು ಮಂಡಳಿ ಅಧ್ಯಕ್ಷ ಸ್ಥಾನದಲ್ಲಿ ಯಾವುದೇ ಬದಲಾವಣೆ ಇಲ್ಲ. ಕಾರ್ಯಕರ್ತರಿಗೆ ನೀಡಲಾಗಿದ್ದ ಅಧಿಕಾರವನ್ನು ಮಾತ್ರ ಕಸಿದು, (2ನೇ ಪುಟಕ್ಕೆ)

## ಅಶೋಕ ರೈಲ್ವೆ ಗೇಟ್ ಸಮಸ್ಯೆ ಪರಿಹಾರಕ್ಕೆ ಅಂಡರ್‌ಪಾಸ್

**ಎಲ್ಲಾ ಅವಕಾಶಗಳನ್ನೂ ಬಳಸಿಕೊಂಡು ಸಮಸ್ಯೆಗೆ ಮುಕ್ತಿ ನೀಡುವಂತೆ ಅಧಿಕಾರಿಗಳಿಗೆ ಸಂಸದ ಸಿದ್ದೇಶ್ವರ ಸೂಚನೆ**

**ರೈಲ್ವೆ ಹಳಿಯ ಇನ್ನೊಂದು ಮಗ್ಗಲಲ್ಲಿ ಸಮಾನಾಂತರ ರಸ್ತೆ ನಿರ್ಮಾಣಕ್ಕೆ ಜಮೀನು ಬಿಟ್ಟುಕೊಡುವಂತೆ ಚರ್ಚಿಸಲು ಮಾಲೀಕರೊಂದಿಗೆ ಡಿಸಿ ಸಭೆ**

ದಾವಣಗೆರೆ, ಜ. 20- ಅಶೋಕ ಚಿತ್ರಮಂದಿರದ ರೈಲ್ವೆ ಗೇಟ್ ಸಮಸ್ಯೆ ಕಳೆದ ನಾಲ್ಕೈದು ದಶಕಗಳ ಸಮಸ್ಯೆ. ಇದನ್ನು ಪರಿಹರಿಸಲು ಏನೇನು ಅವಕಾಶವಿದೆಯೋ ಎಲ್ಲವನ್ನು ಬಳಸಿಕೊಂಡು ಈ ಸಮಸ್ಯೆಗೆ ಮುಕ್ತಿ ನೀಡಿ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಅವರು ತಿಳಿಸಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಳೆದ ನಾಲ್ಕೈದು ದಶಕಗಳ ಈ ಸಮಸ್ಯೆಯನ್ನು ಪರಿಹರಿಸಲು ಇಲ್ಲಿರುವ ರೈಲ್ವೆ ಹಳಿಗೆ ಸಮಾನಾಂತರವಾಗಿ ಅಶೋಕ ಚಿತ್ರಮಂದಿರದ ರಸ್ತೆಯಿಂದ ಈರುಳ್ಳಿ ಮಾರ್ಕೆಟ್ ಸೇತುವೆಯವರೆಗೆ 60 ಅಡಿ ರಸ್ತೆ (2ನೇ ಪುಟಕ್ಕೆ)

## ಕೊರೊನಾ: ಕಳವಳಕಾರಿ ರಾಜ್ಯಗಳಲ್ಲಿ ಕರ್ನಾಟಕ

ಕರ್ನಾಟಕ ಸೇರಿದಂತೆ ಆರು ರಾಜ್ಯಗಳಲ್ಲಿ ಕೊರೊನಾ ಪ್ರಕರಣಗಳು ಹಾಗೂ ಪಾಸಿಟಿವಿಟಿ ದರ ಗಣನೀಯವಾಗಿ ಹೆಚ್ಚಾಗಿದ್ದು, ಇದು ಕಳವಳಕಾರಿಯಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

11 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 50 ಸಾವಿರಕ್ಕಿಂತ ಹೆಚ್ಚಾಗಿದೆ. 13 ರಾಜ್ಯಗಳಲ್ಲಿ 10 ರಿಂದ 50 ಸಾವಿರದವರೆಗೆ ಇದೆ ಎಂದು (2ನೇ ಪುಟಕ್ಕೆ)

## ಅಗರ್ ವಾಲ್ ಟ್ರೇಡರ್ಸ್ ಮಾಲೀಕರಾದ ಬಲ್‌ಭದ್ರ ಜೈನ್ ಧರ್ಮಪತ್ನಿ ಶ್ರೀಮತಿ ದರ್ಶನಾದೇವಿ ನಿಧನ



ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್, 5ನೇ ಮೇನ್, 4ನೇ ಕ್ರಾಸ್ ವಾಸಿ ಹೆಸರಾಂತ ವರ್ತಕರು ಮತ್ತು ಅಗರ್ ವಾಲ್ ಟ್ರೇಡರ್ಸ್ ಮಾಲೀಕರಾದ ಬಲ್‌ಭದ್ರ ಜೈನ್ ಇವರ ಧರ್ಮಪತ್ನಿ

**ಶ್ರೀಮತಿ ದರ್ಶನಾದೇವಿ ಬಲ್‌ಭದ್ರ ಜೈನ್**

ಅವರು, ದಿನಾಂಕ 20-01-2022 ರ ಗುರುವಾರ ರಾತ್ರಿ 7 ಘಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 83 ವರ್ಷ ವಯಸ್ಸಾಗಿತ್ತು. ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21-01-2022ರ ಶುಕ್ರವಾರ ಸಂಜೆ 4 ಘಂಟೆಗೆ ಬೂದಾಳ್ ರಸ್ತೆಯಲ್ಲಿರುವ ಜೈನ್ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ: **ಪತಿ:** ಬಲ್‌ಭದ್ರ ಜೈನ್, ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಬಂಧು-ಮಿತ್ರರು






# ಭದ್ರಾಮೇಲ್ದಂಡೆ ಯೋಜನೆ ಶೀಘ್ರದಲ್ಲೇ ಶಂಕುಸ್ಥಾಪನೆ : ಶಾಸಕ ರಾಮಚಂದ್ರ



ಜಗಳೂರು, ಜ.20- ತಾಲ್ಲೂಕಿನ ಮಹತ್ವದ 1,338 ಕೋಟಿ ರೂ. ವೆಚ್ಚದ ಭದ್ರಾ ಮೇಲ್ದಂಡೆ ಯೋಜನೆಯನ್ನು ಮುಂದಿನ ತಿಂಗಳಲ್ಲಿ ಮುಖ್ಯ ಮಂತ್ರಿಗಳು ಶಂಕುಸ್ಥಾಪನೆ ನೆರವೇಸಲಿದ್ದಾರೆ ಎಂದು ಶಾಸಕ ಎಸ್.ವಿ.ರಾಮಚಂದ್ರ ಹೇಳಿದರು.

ತಾಲ್ಲೂಕಿನ ಹುಚ್ಚವನಹಳ್ಳಿ ಗ್ರಾಮದಲ್ಲಿ ಉಜ್ವಲ ಯೋಜನಯಡಿ ಗ್ಯಾಸ್ ವಿತರಣೆ ಹಾಗೂ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಾಲ್ಲೂಕಿನ ಮಹತ್ವದ ಮತ್ತೊಂದು ಯೋಜನೆಯಾದ 660 ಕೋಟಿ ವೆಚ್ಚದ ಕೆರೆ ತುಂಬಿಸುವ ಯೋಜನೆ ಕಾಮಗಾರಿ ಪ್ರಗತಿಯಲ್ಲಿದೆ. ಈ ಭಾಗದ ರೈತರು ಯಾರು ಜಮೀನು ಮಾರಬೇಡಿ ಎಂದು ಶಾಸಕರು ಮನವಿ ಮಾಡಿದರು.

ಹುಚ್ಚವನಹಳ್ಳಿ ಗ್ರಾಮದಲ್ಲಿ 30 ಫಲಾನುಭವಿಗಳಿಗೆ ಉಚಿತ ಅಡುಗೆ ಅನಿಲ ವಿತರಿಸಿದ್ದೇವೆ. ಇನ್ನು ಅಗತ್ಯ ಪಟ್ಟಿ ತಯಾರಿಸಿ ವಿತರಿಸಲು ಸೂಚಿಸಲಾಗಿದೆ. ಗ್ರಾಮದ ದೇವಸ್ಥಾನಗಳಿಗೆ 8 ಲಕ್ಷ ರೂ. ಅನುದಾನ, ಹೊಸ ಅಂಗನವಾಡಿ ಕೇಂದ್ರ, ಆಯುರ್ವೇದಿಕ್ ಆಸ್ಪತ್ರೆಗೆ ಖಾಯಂ ವೈದ್ಯರು, ರಾಷ್ಟ್ರೀಯ ಹೆದ್ದಾರಿಯಿಂದ ಗ್ರಾಮದ ಸಂಪರ್ಕದ ರಸ್ತೆ ಅಭಿವೃದ್ಧಿ, ಮುಸ್ಲೀಂ ಸಮುಧಾಯ ಭವನ ಹಾಗು ಡಿಪೋ ನಿರ್ಮಾಣದ ನಂತರ ಸರ್ಕಾರಿ ಸಾರಿಗೆ ಸೌಲಭ್ಯಕ್ಕಾಗಿ ಹಂತ ಹಂತವಾಗಿ ಅನುದಾನ ನೀಡುತ್ತೇನೆ ಎಂದು ಹೇಳಿದರು.

ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷ ವೇಣು ಗೋಪಾಲ ರೆಡ್ಡಿ, ಗ್ರಾ.ಪಂ.ಉಪಾಧ್ಯಕ್ಷ ಅನೂಪ್, ಸದಸ್ಯ ನಾಗರಾಜ್, ಮಾಜಿ ಎ.ಪಿ.ಎಂ.ಸಿ. ಅಧ್ಯಕ್ಷ ರಘುರಾಮ್ ರೆಡ್ಡಿ, ಸೂರ್ಯ ಗ್ಯಾಸ್ ಏಜನ್ಸ್ ಬಾಬು, ಗ್ರಾಮದ ಮುಖಂಡರಾದ ತಿಪ್ಪೇಸ್ವಾಮಿ, ಮಾರುತೇಶ್, ರಾಕೇಶ್, ಕಮ್ಮಾರಿ ಸಮಾಜದ ಅಧ್ಯಕ್ಷ ರಂಗನಾಥ ರೆಡ್ಡಿ, ಬಿಜೆಪಿ ಮುಖಂಡರಾದ ಕಾನನಕಟ್ಟೆ ತಿಪ್ಪೇಸ್ವಾಮಿ, ಕೆ.ಎಸ್.ಪ್ರಭು, ಅರವಿಂದ್ ಪಾಟೀಲ್, ಅಮರೇಂದ್ರಪ್ಪ, ರೇವಣ್ಣ ಮುಂತಾದವರು ಇದ್ದರು.

## ಕಳವಳಕಾರಿ ರಾಜ್ಯಗಳಲ್ಲಿ ಕರ್ನಾಟಕ

**(1ನೇ ಪುಟದಿಂದ)** ತಿಳಿಸಲಾಗಿದೆ.

ಕರ್ನಾಟಕದಲ್ಲಿ ಕಳೆದ ಜ.13ಕ್ಕೆ ಅಂತ್ಯವಾದ ವಾರದಲ್ಲಿ ಪಾಸಿಟಿವಿಟಿ ದರ ಶೇ.6.78ರಿಂದ 15.12ಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಇದೇ ವೇಳೆ ಮಹಾರಾಷ್ಟ್ರ, ತಮಿಳುನಾಡು, ಕೇರಳ, ದೆಹಲಿ ಹಾಗೂ ಉತ್ತರ ಪ್ರದೇಶಗಳಲ್ಲೂ ಪಾಸಿಟಿವಿಟಿ ದರ ಹೆಚ್ಚಾಗಿದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ.

# ಕೇಂದ್ರದ ಮಾದರಿಯಲ್ಲಿ ರಾಜ್ಯ ಸರ್ಕಾರವು ನಾಯಕ ಸಮಾಜಕ್ಕೆ 7.5 ಮೀಸಲಾತಿ ನೀಡಲಿ

## ಹರಪನಹಳ್ಳಿ ತಾಲ್ಲೂಕಿನ ಕಾರ್ಯಕ್ರಮದಲ್ಲಿ ಸಂಸದ ವೈ. ದೇವೇಂದ್ರಪ್ಪ

ಹರಪನಹಳ್ಳಿ, ಜ.20- ಕೇಂದ್ರದ ಮಾದರಿಯಲ್ಲಿ ರಾಜ್ಯ ಸರ್ಕಾರ ವಾಲ್ಮೀಕಿ ನಾಯಕ ಜನಾಂಗಕ್ಕೆ ಶೇ. 7.5 ಮೀಸಲಾತಿ ನೀಡಬೇಕು ಎಂದು ಸಂಸದ ವೈ. ದೇವೇಂದ್ರಪ್ಪ ಹೇಳಿದರು.

ರಾಜನಹಳ್ಳಿ ಗುರುಪೀಠದಲ್ಲಿ ಫೆಬ್ರವರಿ 8 ಮತ್ತು 9 ರಂದು ಜರುಗುವ ವಾಲ್ಮೀಕಿ ಜಾತ್ರೆಯ ಅಂಗವಾಗಿ ತಾಲ್ಲೂಕಿನ ಅರಸಿಕೆರೆಯಲ್ಲಿ ಇಂದು ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ವಾಲ್ಮೀಕಿ ಜಾತ್ರೆಯ ಪೋಸ್ಟರ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಾಜ್ಯದಲ್ಲಿ ಸುಮಾರು 45 ಲಕ್ಷ ಜನಸಂಖ್ಯೆ ಹೊಂದಿರುವ ವಾಲ್ಮೀಕಿ ನಾಯಕ ಸಮಾಜ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹಿಂದುಳಿದಿದ್ದು, ಕಳೆದ 3 ದಶಕಗಳಿಂದ ಶ್ರೀಗಳ ನೇತೃತ್ವದಲ್ಲಿ ಪಾದಯಾತ್ರೆ ಸೇರಿದಂತೆ ವಿವಿಧ ರೀತಿಯ ಹೋರಾಟಗಳನ್ನು ಶಾಂತಿಯುತವಾಗಿ ಮಾಡಿಕೊಂಡು ಬಂದರೂ ಕೂಡ ಸರ್ಕಾರ ವಾಲ್ಮೀಕಿ-ನಾಯಕ ಸಮುದಾಯಕ್ಕೆ ಮೀಸಲಾತಿ ನೀಡಿಲ್ಲ ಎಂದರು.



ಈಗಾಗಲೇ ರಾಜ್ಯ ಸರ್ಕಾರ ಮೂರು ಬಾರಿ ಸಮಿತಿಗಳನ್ನು ರಚಿಸಿದೆ. ಅದೇ ರೀತಿ ಪ್ರತಿಯೊಂದು ಜನಾಂಗಕ್ಕೂ ಮೀಸಲಾತಿ ಬೇಕು. ಸರಿಯಾದ ರೀತಿಯಲ್ಲಿ ಮೀಸಲಾತಿ ಬಳಸಿಕೊಳ್ಳಬೇಕು. ಲಿಂಗಾಯತರಿಗೂ 2ಎ ಮೀಸಲಾತಿ ನೀಡಲಿ. ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿ ಪ್ರಕಾರ ಮಾಸ್ಕ್, ಸ್ಯಾನಿಟೈಸರ್ ಬಳಸಿ ಅಂತರ ಕಾಪಾಡಿಕೊಳ್ಳೋಣ ಎಂದು ಹೇಳಿದರು.

ಜಾತ್ರೆ ಸಮಿತಿ ತಾಲ್ಲೂಕು ಅಧ್ಯಕ್ಷ ಆಲದಹಳ್ಳಿ ಷಣ್ಮುಖಪ್ಪ ಮಾತನಾಡಿ, ವಾಲ್ಮೀಕಿ ನಾಯಕ ಸಮಾಜ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹಿಂದುಳಿದಿದ್ದು, ಶ್ರೀಗಳ ನೇತೃತ್ವದಲ್ಲಿ ಪಾದಯಾತ್ರೆ ಸೇರಿದಂತೆ, ವಿವಿಧ ರೀತಿಯ ಹೋರಾಟಗಳನ್ನು ಶಾಂತಿಯುತವಾಗಿ ಮಾಡಿಕೊಂಡು ಬಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರೂ ಸಹ ಈವರೆಗೂ ವಾಲ್ಮೀಕಿ-ನಾಯಕ ಸಮುದಾಯಕ್ಕೆ ಮೀಸಲಾತಿ ನೀಡಲು ಸರ್ಕಾರ ಮೀನಾ ಮೇಷ ಎಣಿಸುತ್ತಿರುವುದು ಖಂಡನೀಯ. ವಿಧಾನಸಭಾ ಚುನಾವಣೆಯಲ್ಲಿ ನಮ್ಮವರನ್ನು ಬಳಸಿಕೊಂಡು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದ್ದು, ನುಡಿದಂತೆ ವಾಲ್ಮೀಕಿ ನಾಯಕ ಸಮುದಾಯಕ್ಕೆ ಸಾಂವಿಧಾನಿಕವಾಗಿ ಶೇ.7.5ರಷ್ಟು ಮೀಸಲಾತಿಯನ್ನು ಹೆಚ್ಚಳ ಮಾಡಬೇಕು ಎಂದರು.

ಇದೇ ಸಂದರ್ಭದಲ್ಲಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗಪ್ಪ, ಕೆ.ಇ.ಬಿ. ನಿವೃತ್ತ ಇಂಜಿನಿಯರ್ ಭೀಮಪ್ಪ, ಮಹಿಳಾ ಘಟಕದ ಗೌರವಾಧ್ಯಕ್ಷರಾದ ಪದ್ಮಾವತಿ, ಮಡಿವಾಳ ಸಮಾಜದ ಜಿಲ್ಲಾ ಅಧ್ಯಕ್ಷ ಯರಬಳ್ಳಿ ಉಮಾಪತಿ, ಮುಖಂಡರಾದ ವೈ.ಡಿ. ಅಣ್ಣಪ್ಪ, ಫಣಿಯಾಪುರ ಲಿಂಗರಾಜ್, ಪರಶುರಾಮ್, ನವೀನ್, ರಂಗಪ್ಪ, ಕಬ್ಬಳ್ಳಿ ಪಾಂಡು, ತುಕ್ಕೇಶ್, ರಾಮಚಂದ್ರಪ್ಪ ಸೇರಿದಂತೆ ಇತರರು ಇದ್ದರು.

# ಮಗಳ ಮದುವೆಗೆ ರಾಜಕೀಯ ನಾಯಕರ ಕರೆಯುವ ಮೂಲಕ ಟಿಕೆಟ್ ಪಡೆಯುವ ದರ್ದು ನನಗೆ ಬಂದಿಲ್ಲ

ಹೊನ್ನಾಳಿ, ಜ.20- ಕೆಲ ವ್ಯಕ್ತಿಗಳಿಂದ ನನ್ನ ಮೇಲೆ ಮಾಧ್ಯಮಗಳ ಮೂಲಕ ರಾಜಕೀಯ ಪಿತೂರಿ ನಡೆಯುತ್ತಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್. ಬಿ.ಮಂಜಪ್ಪ ಅವರು ಕಿಡಿ ಕಾರಿದರು.

ಇಂದಿಲ್ಲಿ ನಡೆದ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ನಮ್ಮ ಪಕ್ಷದ ಸಾಮಾಜಿಕ ಜಾಲ ತಾಣದ ಸಂಚಾಲಕ ತರಗನಹಳ್ಳಿ ಶಿವರಾಜ್ ಎಂಬಾತನೇ ಇದಕ್ಕೆಲ್ಲಾ ಮೂಲ ಸೂತ್ರಧಾರನಾಗಿದ್ದಾನೆ ಎಂದು ದೂರಿದರು.

ನನ್ನ ಮಗಳ ಮದುವೆಗೆ ನನ್ನ ಪಕ್ಷದ ವರಿಷ್ಠರನ್ನು ಕಂಡು ಆಮಂತ್ರಿಸಿದ್ದೇನೆ. ಇದನ್ನು ಟಿಕೆಟ್‌ಗಾಗಿ ಲಾಭಿ ಎನ್ನುವಂತೆ ಪ್ರತಿಬಿಂಬಿಸ ಲಾಗಿದೆ ಎಂದು ಅವರು ಖಂಡಿಸಿದರು.

ಶಿವರಾಜ್ ತನ್ನ ಸ್ಟೇಟಸ್‌ನಲ್ಲಿ 'ಮಗಳ ಮದುವೆ ಆಹ್ವಾನ ಪತ್ರಿಕೆ ಕೊಡಲು ಹಿರಿಯ ನಾಯಕರನ್ನು ಭೇಟಿ ಮಾಡಿದರೆ, ಪಕ್ಷದ ಟಿಕೆಟ್ ಖಾತ್ರಿ ಪಡಿಸಿಕೊಳ್ಳಲು ಅಂತ ತಿಳಿದುಕೊಳ್ಳೋ ಏನು ಹೇಳಬೇಕೋ ಗೊತ್ತಿಲ್ಲ ಎಂಬುದಾಗಿ' ಇದಕ್ಕೆ ನಾನು ಪ್ರತಿಕ್ರಿಯಿಸಿದ್ದೇನೆ ಎಂದು ಹೇಳಿದರು.

ನಾನು ಈ ಬಗ್ಗೆ ಸೋಷಿಯಲ್ ಮೀಡಿಯಾದ ಕಾರ್ಯಕರ್ತನಿಗೆ ಫೋನ್ ಮಾಡಿ, ಈ ರೀತಿ ಮಾಡಬೇಡ ಎಂದು ಹೇಳಿದ್ದೇನೆ. ಆದರೆ, ನನ್ನ ಸಂಭಾಷಣೆಯನ್ನೇ ಎಡಿಟ್ ಮಾಡಿ ನಾನು



ಅವರಿಗೆ ಬೈದಿರುವುದನ್ನು ಮಾತ್ರ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಮಾಡಿದ್ದಾರೆ ಎಂದು ಹೇಳಿದರು.

ನಮ್ಮ ಪಕ್ಷದಲ್ಲಿರುವ ಗಣೇಶ್, ಹುಣಸೇಕಟ್ಟೆ ಹರೀಶ್, ವಾಮದೇವ್, ಹೊಟ್ಯಾಪುರ ಮಲ್ಲೇಶ್ ಇವರುಗಳು ಕೂಡ ಪಕ್ಷದ ನಾಯಕರಿಗೆ ಮುಜುಗರ ಬರುವಂತೆ ಫೋಟೋ ಸಮೇತ ಹೇಳಿಕೆ ಹಾಕಿರುವುದಕ್ಕೆ ಬೇಸರದಿಂದ ಪಕ್ಷದ ಕೆಲಸ ಮಾಡಿ ಎಂದು ಎಚ್ಚರಿಕೆ ನೀಡಿದ್ದೇನೆಂದರು.

**ಎಸ್ಸೆಸ್ಸೆಂ ನನ್ನ ರಾಜಕೀಯ ಗುರು :** ನನ್ನ ರಾಜಕೀಯ ಜೀವನ ಆರಂಭಗೊಂಡಿದ್ದೇ ಮಾಜಿ ಸಚಿವ ಎಸ್. ಎಸ್.ಮಲ್ಲಿಕಾರ್ಜುನ್ ಅವರ ಗರಡಿಯಲ್ಲಿ. ಅವರೇ ನನ್ನ ರಾಜಕೀಯ ಗುರುವಾಗಿದ್ದಾರೆ. ನಾನು ಕೂಡ ಕಾಂಗ್ರೆಸ್ ಟಿಕೆಟ್ ಆಕ್ಷಾಂಕ್ಷಿಯಾಗಿದ್ದೇನೆ. ಇದು ಒಬ್ಬ ಕಾರ್ಯಕರ್ತನಿಗೆ ಸಹಜ ಬಯಕೆ ಕೂಡ ಆಗಿದೆ. ಆದರೆ, ಚುನಾವಣೆ ಸಂದರ್ಭದಲ್ಲಿ ಪಕ್ಷದ ವರಿಷ್ಠರು ನನ್ನ ಬಿಟ್ಟು ಬೇರೆಯವರಿಗೆ ಟಿಕೆಟ್ ನೀಡಿದರೆ, ಅವರ ಗೆಲುವಿಗೆ ಶ್ರಮಿಸುವುದು ಒಬ್ಬ ನಿಷ್ಠಾವಂತ ಕಾರ್ಯಕರ್ತನಾದ ನನ್ನ ಕರ್ತವ್ಯ ಕೂಡ ಆಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಬೀರಪ್ಪ, ಹರಳಹಳ್ಳಿ ಬೆನಕಪ್ಪ, ಮಲ್ಲೇಶಪ್ಪ, ಮಾದಪ್ಪ, ಅಣ್ಣಪ್ಪ, ಬಸವರಾಜಪ್ಪ ಇಟಗಿ, ಕುಮಾರ್ ಮತ್ತಿತರರಿದ್ದರು.

# ರೈಲ್ವೆ ಗೇಟ್ ಸಮಸ್ಯೆ ಪರಿಹಾರಕ್ಕೆ ಅಂಡರ್‌ಪಾಸ್



**(1ನೇ ಪುಟದಿಂದ)** ನಿರ್ಮಾಣ ಮಾಡಬೇಕಾಗಿದ್ದು ರಸ್ತೆ ಯನ್ನು ಮಹಾನಗರಪಾಲಿಕೆ ಅಥವಾ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಾಡಿಕೊಡಲಾಗುವುದು ಎಂದು ಹೇಳಿದರು. ಇದಕ್ಕೂ ಮುನ್ನ ಕೆಳಸೇತುವೆ ನಿರ್ಮಾಣ ವಾದರೆ ಸೇತುವೆಗೆ ಸಂಪರ್ಕ ಕಲ್ಪಿಸಲು ರೈಲ್ವೆ ಹಳಿಯ ಇನ್ನೊಂದು ಮಗ್ಗುಲಲ್ಲಿ ಸಮಾನಾಂತರ ರಸ್ತೆ ನಿರ್ಮಾಣ ಮಾಡಬೇಕಾಗುತ್ತದೆ ಎನ್ನುವ ವಿಷಯ ಸಭೆಯಲ್ಲಿ ಚರ್ಚೆಗೆ ಬಂದಿತು. ಸಮಾನಾಂತರ ರಸ್ತೆ ನಿರ್ಮಾಣ ಮಾಡಲು ಅಲ್ಲಿ ಖಾಸಗಿ ಜಮೀನನ್ನು ಬಳಸಿಕೊಂಡು ರಸ್ತೆ ನಿರ್ಮಾಣ ಮಾಡಬೇಕಾಗುತ್ತದೆ. ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಮಾಲೀಕರಿಗೆ ಪರಿಹಾರ ನೀಡಲು ಈ ಯೋಜನೆಯಡಿ ಯಾವುದೇ ಅವಕಾಶ ಇಲ್ಲ ಎನ್ನುವ ವಿಷಯವನ್ನೂ ಸಹ ಮಾಲೀಕರಿಗೆ ತಿಳಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ಪ್ರಸ್ತಾಪಿಸಿದರು. ನಾಳೆಯೇ ಅಲ್ಲಿರುವ ಖಾಸಗಿ ಜಮೀನಿನ ಮಾಲಿಕರ ಸಭೆ ಕರೆದು ಸಮಾನಾಂತರ ರಸ್ತೆ ನಿರ್ಮಾಣಕ್ಕೆ ಜಾಗ ಬಿಟ್ಟುಕೊಡುವಂತೆ ಮಾಲಿಕರ ಮನವೊಲಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಬೆಂಗಳೂರಿನ ರೈಲ್ವೆ ಇಲಾಖೆ ಡೆಪ್ಯುಟಿ ಚೀಫ್ ಇಂಜಿನಿಯರ್ ದೇವೇಂದ್ರಗುಪ್ತ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಶ್ರೀಧರ್ ಮೂರ್ತಿ, ಮಹಾಪೌರ ಎಸ್.ಟಿ. ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ಅಧೀಕ್ಷಕ ಸಿ.ಬಿ. ರಿಷ್ಯಂತ್, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ದೂಡಾ ಆಯುಕ್ತ ಕುಮಾರಸ್ವಾಮಿ, ಮಹಾನಗರಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.


## 10ನೇ ಪುಣ್ಯಸ್ಮರಣೆ



ದಿ. ಬಸಾಪುರದ ಅಂಗಡಿ ಮಹೇಶ್ವರಪ್ಪ

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದರ್ಶನ ನಮಗೆ ದಾರಿದೀಪ. ಸದಾ ನಿಮ್ಮ ಸ್ಮರಣೆಯಲ್ಲಿರುವ,

**ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು**
**ಮಗಳು : ದೀಪಿಕಾ ಜೆ.ಸಿ. ಚಂದನ್ ಹಾಗೂ ಸೊಸೆಯಂದಿರು, ಮೊಮ್ಮಕ್ಕಳು.**
**ಶ್ರೀ ಗುರು ಕೊಟ್ಟೂರೇಶ್ವರ ಟ್ರೇಡರ್ಸ್** ನರಸರಾಜ ರಸ್ತೆ, ದಾವಣಗೆರೆ.

## ಸವಿನೆನಪು



**ದಿ|| ವಿ.ಎಂ. ಸುನೀಲ್‌ಗೌಡ ಮುದೇಗೌಡ್ರು**

*ನೀವು ನಮ್ಮನ್ನು ಅಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿನ್ನ ನೆನಪಿನಲ್ಲಿ ಜೀವನ ಸಾಗಿಸುತ್ತಿದ್ದೇವೆ.*

ತಂದೆ : ವೀರನಗೌಡ ಮುದೇಗೌಡ್ರು, ತಾಯಿ : ಲತಾ ವೀರನಗೌಡ್ರು ಮುದೇಗೌಡ್ರು ಟ್ರೇಡರ್ಸ್, ದಾವಣಗೆರೆ. ಮುದೇಗೌಡ್ರು ವಂಶಸ್ಥರು, ಬಿಲ್ಲಳ್ಳಿ. ತಿಪ್ಪೇಸ್ವಾಮಿ, ಕಮಲಮ್ಮ, ಸಿದ್ದೇಶ್, ಶೃತಿ ಮತ್ತು ಮಕ್ಕಳು ಗೌಡ್ರ ವಂಶಸ್ಥರು, ಅಣ್ಣಾಪುರ., ಡಿ. ಜಯ್ಯಪ್ಪ, ಡಿ. ನಾಗರಾಜ್, ಪವಿತ್ರ ಮತ್ತು ಮಕ್ಕಳು, ಅಣ್ಣಾಪುರ. ವನಿತಾ ಯೋಗ ಕೇಂದ್ರ, ದಾವಣಗೆರೆ.

|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ/ತಾಲ್ಲೂಕು ಬಂಬೂಬಜಾರ್ ಬಸಾಪುರ ಗ್ರಾಮದ ವಾಸಿ **ಆನೆಕೊಂಡದ ರೇವಕ್ಕಳರ ಎ.ಆರ್. ವಿರೂಪಾಕ್ಷಪ್ಪ ಮತ್ತು ಸಹೋದರರು** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ :14.01.2022ರ ಶುಕ್ರವಾರ ಬೆಳಿಗ್ಗೆ 5.15ಕ್ಕೆ ನನ್ನ ಧರ್ಮಪತ್ನಿಯಾದ **ಶರಣೆ ಬಿ.ಎಸ್. ಶಂಕ್ರಮ್ಮನವರು** ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ : 22.01.2022 ನೇ ಶನಿವಾರ ಬೆಳಿಗ್ಗೆ 10.30 ಕ್ಕೆ ಬಂಬೂಬಜಾರ್ ಬಸಾಪುರ ಗ್ರಾಮದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖಿತಪ್ತರು: ಎ.ಆರ್. ವಿರೂಪಾಕ್ಷಪ್ಪ ಮತ್ತು ಸಹೋದರರು, ಮೃತರ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಆನೆಕೊಂಡದ ರೇವಕ್ಕಳರ ವಂಶಸ್ಥರು, ಬಸಾಪುರ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
**ಮೊ: 96636 72701, 99454 64999, 99005 09632**


## ನಿಗಮಗಳಿಗೆ ಹೊಸಬರು

**(1ನೇ ಪುಟದಿಂದ)** ಹೊಸಬರಿಗೆ ನೀಡಲು ಸಮಿತಿ ಶಿಫಾರಸ್ಸು ಮಾಡಿದೆ.

ಪ್ರತಿ ಜಿಲ್ಲೆಗೆ ನಿಗಮದ ಅಧ್ಯಕ್ಷ ಮತ್ತು ಸದಸ್ಯರು ಸೇರಿದಂತೆ ಐದು ಮಂದಿಯನ್ನು ಆಯ್ಕೆ ಮಾಡಲಾಗಿದೆ. ಅದರಲ್ಲೂ ಸಂಘ, ಪಕ್ಷದ ಸಂಘಟನೆ ಯಲ್ಲಿ ನಿಷ್ಠಾವಂತರಾಗಿ ದುಡಿದಿರುವವರಿಗೆ ಅಧಿಕಾರ ಲಭ್ಯವಾಗಲಿದೆ.

ಯಡಿಯೂರಪ್ಪ ಅವರು ನೇಮಕ ಮಾಡಿದ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಅಸಮಾಧಾನ ಎದ್ದಿತ್ತು. ತಮ್ಮ ಬೆಂಬಲಿಗರು ಹಾಗೂ ಒಂದು ಸಮಾಜದವರಿಗೆ ಹೆಚ್ಚಿನ ಸ್ಥಾನ ನೀಡಲಾಗಿದೆ ಎಂಬ ದೂರುಗಳು ಬಂದಿದ್ದವು. ಆದರೆ ಈ ಬಾರಿ ಪಕ್ಷದ ಅಧ್ಯಕ್ಷರು ಮತ್ತು ಇತರೆ ಹಿರಿಯ ಸದಸ್ಯರೇ ಪಟ್ಟಿ ಸಿದ್ಧಪಡಿಸಿ, ಮುಖ್ಯಮಂತ್ರಿಯವರಿಗೆ ಶಿಫಾರಸ್ಸು ಮಾಡಿರು ವುದಲ್ಲದೆ, ತಕ್ಷಣವೇ ನೇಮಕಾತಿ ಆದೇಶ ಹೊರಡಿಸಲು ಪಕ್ಷ ಸೂಚಿಸಿದೆ.

## ನಗರದಲ್ಲಿ ಇಂದು ವಿದ್ಯುತ್ ಇಲ್ಲ

ಎಸ್.ಎಸ್. ಲೇಔಟ್ ಎ ಬ್ಲಾಕ್, ಕುವೆಂಪು ನಗರ, ಸಿದ್ದವೀರಪ್ಪ ಬಡಾವಣೆ, ಶಾಮನೂರು ರಸ್ತೆ, ಗ್ಲಾಸ್ ಹೌಸ್, ಎಸ್.ಎಸ್. ಮಾಲ್, ಲಕ್ಷ್ಮಿ ಫ್ಲೋರ್‌ಮಿಲ್ ಹಾಗೂ ಸುತ್ತ ಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

### ಹಳೇಬಾತಿ ಭದ್ರಪ್ಪರ ಗೌರಮ್ಮ ನಿಧನ



ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ ದಿ. ಭದ್ರಪ್ಪರ ಸಿದ್ದಪ್ಪನವರ ಧರ್ಮಪತ್ನಿ ಶ್ರೀಮತಿ ಗೌರಮ್ಮನವರು (78) ದಿನಾಂಕ 20.01.2022ನೇ ಗುರುವಾರ ಮಧ್ಯಾಹ್ನ 2.25 ಕ್ಕೆ ನಿಧನರಾದರು. ಮೂವರು ಪುತ್ರರು, ಮೂವರು ಪುತ್ರಿಯರು ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.01.2022 ರ ಶುಕ್ರವಾರ ಮಧ್ಯಾಹ್ನ 1.00 ಗಂಟೆಗೆ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

### ಬಿ. ಚಂದ್ರಶೇಖರ್ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 5ನೇ ಮೇನ್, 14ನೇ ಕ್ರಾಸ್ (# 2744/4) ವಾಸಿ ದಿ. ಬಸವಲಿಂಗಪ್ಪ ಇವರ ಪುತ್ರ ನಿವೃತ್ತ ಇಂಜಿನಿಯರ್ ಬಿ. ಚಂದ್ರಶೇಖರ್ (ಮಹಾರಾಷ್ಟ್ರ) (78) ಅವರು ದಿನಾಂಕ 20.1.2022 ರಂದು ಗುರುವಾರ ಸಂಜೆ 5.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.01.2022 ರಂದು ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಗರದ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.


## ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಮಲೇಬೆನ್ನೂರು ಪಟ್ಟಣದ ಬಸವೇಶ್ವರ ಬಡಾವಣೆ ವಾಸಿ **ಪೂಜಾರ್ ಬಸಪ್ಪ ಮತ್ತು ಸಹೋದರರು** ಇವರು ಮಾಡುವ ವಿಜ್ಞಾಪನೆಗಳು. ದಿ. 30.12.2021ನೇ ಗುರುವಾರ ಸಂಜೆ 6.30ಕ್ಕೆ ನಮ್ಮ ಪೂಜ್ಯ ಅಣ್ಣನವರಾದ ದಿ. ಪೂಜಾರ್ ಹನುಮಂತಪ್ಪನವರ ಧರ್ಮಪತ್ನಿ **ಪೂಜಾರ್ ಶ್ರೀಮತಿ ರುದ್ರಮ್ಮನವರು** ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ : 21.01.2022ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಮಲೇಬೆನ್ನೂರಿನಲ್ಲಿರುವ ಮೃತರ ಸ್ವಗೃಹದಲ್ಲಿ** ಹಮ್ಮಿಕೊಳ್ಳಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಬಯಸುವ

ಇಂತಿ ದುಃಖಿತಪ್ತರು : **ಪೂಜಾರ್ ಮಲ್ಲಿಕಾರ್ಜುನಪ್ಪ ಮತ್ತು ಮಕ್ಕಳು**
**ಪೂಜಾರ್ ಗಂಗೇನಳ್ಳೆಪ್ಪ ಮತ್ತು ಮಕ್ಕಳು, ಪೂಜಾರ್ ಹಾಲೇಶಪ್ಪ ಮತ್ತು ಮಕ್ಕಳು**
**ಸಹೋದರಿಯರು, ಮಾವಂದಿರು, ಅಳಿಯಂದಿರು, ಮೊಮ್ಮಕ್ಕಳು, ಪೂಜಾರ್ ವಂಶಸ್ಥರು ಹಾಗೂ ಬಂಧು-ಮಿತ್ರರು.**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ಹರಿಹರದ ಯುವಕನ ಕತ್ತು ಸೀಳಿ ಬರ್ಬರ ಹತ್ಯೆ

ದಾವಣಗೆರೆ, ಜ.20- ಸಹೋದರನ ಮದುವೆಗೆ ಬಟ್ಟೆ ಖರೀದಿಗೆಂದು ಹರಿಹರದಿಂದ ನಗರಕ್ಕಾಗಮಿಸಿದ್ದ ಯುವಕನೋರ್ವನ ಕುತ್ತಿಗೆ ಸೀಳಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಕುಂದವಾಡ ಕೆರೆ ಬಳಿಯ ಮಹಾಲಕ್ಷ್ಮಿ ಲೇಔಟ್‌ನ ನಿರ್ಜನ ಪ್ರದೇಶದಲ್ಲಿ ನಡೆದಿದೆ.

ಹರಿಹರದ ವಿಜಯನಗರ ಬಡಾವಣೆಯ ಮಹಮದ್ ಅಲ್ತಾಫ್ (21) ಹತ್ಯೆಯಾದ ಯುವಕ. ಈತ ದುಗ್ಗಾವತಿಯ ಶಾಮನೂರು ಷುಗರ್ಸ್ ಫ್ಯಾಕ್ಟರಿಯಲ್ಲಿ ಎಲೆಕ್ಟ್ರೀಷಿಯನ್ ಆಗಿದ್ದ. ಈತ ತನ್ನ ತಾಯಿಯ ಅಕ್ಕನ ಮಗ ಇಬ್ರಾಹಿಂನ ಮದುವೆಗೆ ಬಟ್ಟೆ ಖರೀದಿಸಲೆಂದು ಇದೇ ದಿನಾಂಕ 18ರ ಸಂಜೆ 6 ಗಂಟೆ ಸಮಯದಲ್ಲಿ ಹರಿಹರದಿಂದ ಇಬ್ರಾಹಿಂ ಜೊತೆಗೆ ದ್ವಿಚಕ್ರ ವಾಹನದಲ್ಲಿ ನಗರಕ್ಕೆ ಬಂದಿದ್ದ. ಮಹಮ್ಮದ್ ಅಲ್ತಾಫ್ ರಾತ್ರಿಯಾದರೂ ಮನೆಗೆ ಬಂದಿರಲಿಲ್ಲ. ಪೋಷಕರು ಈತನ ಮೊಬೈಲ್ ಸಂಖ್ಯೆಗೆ ಕರೆ ಮಾಡಿದರೂ ಕರೆ ಸ್ವೀಕರಿಸಿಲ್ಲ. ಎಲ್ಲಾ ಕಡೆ ಹುಡುಕಿದರೂ ಪತ್ತೆಯಾಗಿಲ್ಲ.

ಮರು ದಿನ ಸಂಜೆ ಈತನ ತಂದೆ ಮೆಹಬೂಬ್ ಪಾಷಾ ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ತನ್ನ ಮಗ ಮಹಮದ್ ಅಲ್ತಾಫ್ ಕಾಣೆಯಾಗಿರುವ ಬಗ್ಗೆ ದೂರು ದಾಖಲಿಸಿದ್ದರು. ಇದಾದ ಮುಕ್ಕಾಲು ಗಂಟೆಯಲ್ಲಿ ದಾವಣಗೆರೆ ವಿದ್ಯಾನಗರ ಪೊಲೀಸರು ಕುಂದವಾಡ ಕೆರೆಯ ಮಹಾಲಕ್ಷ್ಮಿ ಲೇಔಟ್ ನ ನಿರ್ಜನ ಪ್ರದೇಶದಲ್ಲಿ ಕತ್ತು ಸೀಳಿ ಕೊಲೆ ಮಾಡಿದ್ದ ಸ್ಥಿತಿಯಲ್ಲಿ ಪತ್ತೆಯಾದ ಯುವಕನ ಶವದ ಗುರುತನ್ನು ಮೆಹಬೂಬ್ ಪಾಷಾ ಅವರನ್ನು ಕರೆಸಿ ಪತ್ತೆ ಹಚ್ಚಿದ್ದಾರೆ.

ಮಹಮದ್ ಆಲ್ತಾಫ್‌ನ ಜೊತೆಗೆ ಬಂದಿದ್ದ ಇಬ್ರಾಹಿಂ ಮತ್ತು ದ್ವಿಚಕ್ರ ವಾಹನದ ಬಗ್ಗೆ ಮಾಹಿತಿ ಕಂಡು ಬಂದಿಲ್ಲ. ಯಾರೋ, ಯಾವುದೋ ವಿಚಾರಕ್ಕೆ ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಮೃತನ ತಂದೆ ವಿದ್ಯಾನಗರ ಪೊಲೀಸರಿಗೆ ದೂರು ನೀಡಿದ್ದಾರೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ನಗರ ಉಪ ವಿಭಾಗದ ಡಿವೈಎಸ್‌ಪಿ ನರಸಿಂಹ ವಿ. ತಾಮ್ರಧ್ವಜ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಆರೋಪಿ ಪತ್ತೆಗೆ ಸಿಪಿಐ ಹೆಚ್. ಗುರುಬಸವರಾಜ್ ಅವರ ನೇತೃತ್ವದಲ್ಲಿ ಪಿಎಸ್‌ಐಗಳಾದ ಪಿ. ಪ್ರಸಾದ್, ಜಿ.ಎಂ. ರೇಣುಕಾ ಒಳಗೊಂಡ ತಂಡ ರಚಿಸಿದ್ದು, ತನಿಖೆ ನಡೆಸಲಾಗುತ್ತಿದೆ.

### ದನ ಮೇಯಿಸುವಾತನಿಂದ ಶವದ ಮಾಹಿತಿ

ಮೊನ್ನೆ ಬುಧವಾರ ಮಧ್ಯಾಹ್ನ ದನ ಮೇಯಿಸುವ ಓರ್ವನು ವ್ಯಕ್ತಿಯೋರ್ವರ ಶವ ಪತ್ತೆಯಾಗಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದ. ಈ ಆಧಾರದ ಮೇರೆಗೆ ಶವ ಪತ್ತೆ ಯಾದ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ಕುಂದವಾಡ ಕೆರೆ ಬಳಿಯ ಮಹಾಲಕ್ಷ್ಮಿ ಲೇಔಟ್ ನ ದನ ಮೇಯಿಸುವ ನಿರ್ಜನ ಪ್ರದೇಶದಲ್ಲಿ ಮಹಮ್ಮದ್ ಆಲ್ತಾಫ್ ನ ಕತ್ತು ಸೀಳಿ ಕೊಲೆ ಮಾಡಲಾಗಿತ್ತು. ಈ ಕೊಲೆಗೆ ಕಾರಣ ತಿಳಿದು ಬಂದಿಲ್ಲ. ತನಿಖೆ ನಡೆಸಲಾಗುತ್ತಿದ್ದು, ಸಂಪೂರ್ಣ ತನಿಖೆಯಿಂದ ಈ ಕೊಲೆ ಪ್ರಕರಣ ಪತ್ತೆ ಹಚ್ಚಬಹುದು.

**- ಸಿ.ಬಿ.ರಿಷ್ಯಂತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

**ಸಹೋದರನ ಮದುವೆಯ ಬಟ್ಟೆ ಖರೀದಿಗೆ ಬಂದು ಶವವಾಗಿ ಪತ್ತೆ**

## ಸಂಸದರ ಭೇಟಿ

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1 ರವರೆಗೆ ದಾವಣಗೆರೆಯಲ್ಲಿ ನಡೆಯಲಿ ರುವ ವಿವಿಧ ಅಭಿವೃದ್ಧಿ ಕಾಮ ಗಾರಿಗಳ ಶಂಕುಸ್ಥಾಪನೆ ಕಾರ್ಯ ಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಉದ್ಯೋಗ ಖಾತ್ರಿ ಯೋಜನೆಯಡಿ ಸ್ವಚ್ಛಗೊಂಡ ಹೊಲಗಾಲುವೆ

ಮಲೇಬೆನ್ನೂರು, ಜ.20- ಜಿಗಳಿ ಗ್ರಾ. ಪಂ. ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಹೊಲಗಾಲುವೆಗಳನ್ನು ಸ್ವಚ್ಛಗೊಳಿಸುತ್ತಿರುವುದಕ್ಕೆ ರೈತರು ಸಂತಸ ವ್ಯಕ್ತಪಡಿಸಿದ್ದಾರೆ.

ಹೊಲಗಾಲುವೆಗಳು ಗಿಡ-ಗಂಟೆಗಳಿಂದ ತುಂಬಿಕೊಂಡು ನೀರು ಸರಾಗವಾಗಿ ಹರಿಯು ವುದಕ್ಕೆ ತೊಂದರೆ ಉಂಟಾಗಿತ್ತು. ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಕಾರ್ಮಿಕರಿಂದ ಕಾಲುವೆಗಳನ್ನು ಸ್ವಚ್ಛಗೊಳಿಸುತ್ತಿದ್ದಾರೆ. ಇದರಿಂದ ರೈತರಿಗೆ ಅನುಕೂಲವಾಗಲಿದೆ ಎಂದು ರೈತ ಕೆ.ಎಸ್. ನಂದ್ಯೆಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಗಳಿಯಲ್ಲಿ 5 ಹೊಲಗಾಲುವೆಗಳು ಮತ್ತು ವಡೆಯರ ಬಸಾಪುರದಲ್ಲಿ 1 ಕಾಲುವೆಯನ್ನು ಸುಮಾರು 100 ಜನ ಕೂಲಿ ಕಾರ್ಮಿಕರನ್ನು ಬಳಸಿ ಸ್ವಚ್ಛಗೊಳಿಸಿದ್ದೇವೆ.

2020-21 ಮತ್ತು 22 ನೇ ಸಾಲಿನ ಕ್ರಿಯಾ ಯೋಜನೆಯಡಿ ಈ ಕಾಮಗಾರಿಗಳನ್ನು ಸೇರಿಸಿದ್ದೆವು. ಇನ್ನೊಷ್ಟು ಹೊಲಗಾಲುವೆಗಳನ್ನು ಸ್ವಚ್ಛಗೊಳಿಸುವ ಕೆಲಸಗಳನ್ನು ನಾಟಿ ಮಾಡುವುದರ ಒಳಗಾಗಿ ಮಾಡುತ್ತೇವೆ ಎಂದು ಜಿಗಳಿ ಗ್ರಾ.ಪಂ. ಪಿಡಿಓ ಉಮೇಶ್ ತಿಳಿಸಿದ್ದಾರೆ.




ಪ್ರತಿ ಕೂಲಿ ಕಾರ್ಮಿಕರಿಗೆ 289 ರೂ.ಗಳನ್ನು ದಿನವೊಂದಕ್ಕೆ ನೀಡಲಾಗುವುದು. ಕೂಲಿ ಕಾರ್ಮಿಕರು ಸಹ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಉಮೇಶ್ ಹೇಳಿದರು.

ಉದ್ಯೋಗ ಖಾತ್ರಿ ಯೋಜನೆಯ ಸದ್ಬಳಕೆಯನ್ನು ಜಿಗಳಿ ಗ್ರಾ.ಪಂ. ಸಮರ್ಪಕವಾಗಿ ಮಾಡಿಕೊಳ್ಳುತ್ತಿದೆ ಎಂದು ಗ್ರಾ.ಪಂ. ಸದಸ್ಯ ಡಿ.ಎಂ. ಹರೀಶ್ ತಿಳಿಸಿದರು.

# ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಸಾಧನೆಯೇ ಅರ್ಹತೆಯಲ್ಲ

## ಪರೀಕ್ಷೆಗಳು ಅವಕಾಶದಲ್ಲಿ ಸಮಾನತೆ ಕಲ್ಪಿಸುತ್ತವೆ ಅಷ್ಟೇ : ಸುಪ್ರೀಂ

ನವದೆಹಲಿ, ಜ. 20 – ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆ ಒಂದೇ ಅರ್ಹತೆಯಾಗದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಇತರೆ ಹಿಂದುಳಿದ ವರ್ಗಗಳಿಗೆ ನೀಟ್ ಪರೀಕ್ಷೆಗಳಲ್ಲಿ ಶೇ.27ರ ಮೀಸಲಾತಿ ಕಲ್ಪಿಸುವುದನ್ನು ಎತ್ತಿ ಹಿಡಿದಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವುದಕ್ಕೆ ಅನುಮತಿ ನೀಡಿರುವುದು ಸೂಕ್ತವಾಗಿದೆ ಎಂದಿರುವ ನ್ಯಾಯಾಲಯ, ಕೊರೊನಾ ಸಂದರ್ಭದಲ್ಲಿ ವೈದ್ಯರ ನೇಮಕದಲ್ಲಿ ಯಾವುದೇ ವಿಳಂಬವಾಗುವುದು ಸೋಂಕು ನಿರ್ವಹಣೆಯ ಮೇಲೆ ಪ್ರಭಾವ ಬೀರುತ್ತಿತ್ತು ಎಂದು ಹೇಳಿದೆ.

ವೈದ್ಯಕೀಯ ಶಿಕ್ಷಣದಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಶೇ.27ರ ಮೀಸಲಾತಿ ನೀಡುವುದು ಸೂಕ್ತವಾಗಿದೆ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎ.ಎಸ್. ಬೋಪಣ್ಣ ಅವರನ್ನು ಒಳಗೊಂಡ ಪೀಠ ಹೇಳಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳು ಕೇವಲ ಅವಕಾಶದಲ್ಲಿ ಸಮಾನತೆ ಕೊಡುತ್ತವೆ. ಇಲ್ಲಿನ ಸಾಧನೆಯನ್ನೇ ಅರ್ಹತೆ ಎಂಬ ಸಂಕುಚಿತ ದೃಷ್ಟಿಯಿಂದ ನೋಡಲಾಗದು ಎಂದು ನ್ಯಾಯಾಲಯ ತಿಳಿಸಿದೆ.

ಪರೀಕ್ಷೆಗಳು ಶೈಕ್ಷಣಿಕ ಸಂಪನ್ಮೂಲ ಹಂಚಿಕೆಯನ್ನು ನಿರ್ಧರಿಸುತ್ತವೆ. ಇವು ವ್ಯಕ್ತಿಗಳ ಶ್ರೇಷ್ಠತೆ ಹಾಗೂ ಸಾಮರ್ಥ್ಯವನ್ನು ತೋರಿಸುವುದಿಲ್ಲ. ಜೀವನದ ಅನುಭವ, ತರಬೇತಿ ಹಾಗೂ ವ್ಯಕ್ತಿಗಳ ಸ್ವಭಾವಗಳೂ ಅವರ ಸಾಮರ್ಥ್ಯವನ್ನು ಬಿಂಬಿಸುತ್ತವೆ ಎಂದು ನ್ಯಾಯಾಲಯ ಹೇಳಿದೆ. ಕೆಲ ವರ್ಗಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಹೊಂದಿರುವ ಅನುಕೂಲವನ್ನು ಮತ್ತು ಅದರಿಂದ ಪರೀಕ್ಷೆಗಳ ಯಶಸ್ಸಿಗೆ ನೆರವಾಗಿರುವುದನ್ನು ಸ್ಪರ್ಧಾತ್ಮಕ ಪರೀಕ್ಷೆಗಳು ಬಿಂಬಿಸುವುದಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

ಪರೀಕ್ಷೆಯಲ್ಲಿ ಗಳಿಸಿದ ಹೆಚ್ಚಿನ ಅಂಕಗಳು ಅರ್ಹತೆಯನ್ನು ತೋರಿಸುವುದಿಲ್ಲ. ಅರ್ಹತೆಯನ್ನು ಸಾಮಾಜಿಕವಾಗಿ ನೋಡಬೇಕು. ಸಮಾನತೆಯಂತಹ ಸಾಮಾಜಿಕ ಒಳಿತಿನ ಹಿನ್ನೆಲೆಯಲ್ಲಿ ಅರ್ಹತೆ ಪರಿಗಣಿಸಬೇಕು. ಹೀಗಾಗಿ ಮೀಸಲಾತಿ ಅರ್ಹತೆಗೆ ವಿರುದ್ಧವಲ್ಲ ಎಂದು ನ್ಯಾಯಾಲಯ ಹೇಳಿದೆ.

# ಸ್ವಾಮಿ ವಿವೇಕಾನಂದರ ವೇಷಭೂಷಣ ಧರಿಸಿ ರಾಷ್ಟ್ರೀಯ ಯುವ ದಿನ ಆಚರಣೆ



ಮಲೇಬೆನ್ನೂರು, ಜ. 20- ಇಲ್ಲಿನ ಪಿಡಬ್ಲ್ಯುಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಸ್ವಾಮಿ ವಿವೇಕಾನಂದರ ವೇಷಭೂಷಣ ಧರಿಸಿ ರಾಷ್ಟ್ರೀಯ ಯುವ ದಿನ ಆಚರಿಸುವ ಮೂಲಕ ಗಮನ ಸೆಳೆದರು.

# ಮುಂದೇನು ಅಡಿಕೆ ಬೆಳೆಯ ಭವಿಷ್ಯ ?

ಮಧ್ಯ ಕರ್ನಾಟಕದ ತ್ರಿವಳಿ ಜಿಲ್ಲೆಗಳಾದ ದಾವಣಗೆರೆ, ಶಿವಮೊಗ್ಗ ಮತ್ತು ಚಿತ್ರದುರ್ಗಗಳಲ್ಲಿ ಮಧ್ಯಮ ವರ್ಗದ ರೈತರು ಆರ್ಥಿಕವಾಗಿ ಸಬಲರಾಗಲು ಕಾರಣವಾದ ಮುಖ್ಯ ಬೆಳೆ ಅಡಿಕೆ. ಪ್ರತಿ ಎಕರೆಗೆ ಗರಿಷ್ಠ ನಿವ್ವಳ ಆದಾಯವನ್ನು ಕೊಡುವ ಈ ಬೆಳೆಯಿಂದಾಗಿ ಇಂದು ರೈತರು ಉತ್ತಮ ಜೀವನ ನಡೆಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಆದರೂ ಕೆಲವೊಮ್ಮೆ ಬೆಲೆಯ ಏರುಪೇರು, ಬರಗಾಲದಿಂದ ನೀರಿನ ಕೊರತೆ, ರೋಗ, ಕೀಟಗಳ ಹಾವಳಿ ಹೀಗೆ ಹಲವಾರು ಸಮಸ್ಯೆಗಳಿಂದ ರೈತ ನಲುಗಿ ಹೋಗಿದ್ದಾನೆ. ಇಂತಹ ಸಮಯದಲ್ಲಿ ಬೆಳೆಗೆ ಬೆಲೆಯ ಸ್ಥಿರತೆಯನ್ನು ಕಾಪಾಡಿಕೊಳ್ಳುವ ಅನಿವಾರ್ಯ ಪರಿಸ್ಥಿತಿ ಒದಗಿಬಂದಿದೆ.

ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಸುಮಾರು 72000 ಹೆಕ್ಟೇರ್, ಶಿವಮೊಗ್ಗ ಜಿಲ್ಲೆಯಲ್ಲಿ 93000 ಹೆಕ್ಟೇರ್ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ 30000 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯನ್ನು ಬೆಳೆಯಲಾಗುತ್ತಿದ್ದು, ರಾಶಿ ಪ್ರಮುಖ ಉತ್ಪನ್ನವಾಗಿದೆ. ಮೂರು ಜಿಲ್ಲೆಗಳಲ್ಲಿ ಅಂದಾಜು 30 ಲಕ್ಷ ಟನ್ ಅಡಿಕೆ ಉತ್ಪಾದನೆ ಆದರೆ, ಇದರ ಅಂದಾಜು ಮೌಲ್ಯ ನೂರಾರು ಕೋಟಿಗಳಷ್ಟಿದೆ. ಇಷ್ಟೆಲ್ಲಾ ಆರ್ಥಿಕ ವಹಿವಾಟಿನ ಈ ಬೆಳೆಗೆ ಬೆಲೆ ಸ್ಥಿರತೆಯನ್ನು ಕೊಡುವ ನಿಟ್ಟಿನಲ್ಲಿ ಆಗಬೇಕಾದ ಪ್ರಮುಖ ಅಂಶಗಳನ್ನು ಇಂದು ನಾವು ನಿರ್ಧರಿಸಬೇಕಾಗಿದೆ.

ಈಗಾಗಲೇ ಇಳುವರಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ, ರೋಗ ಮತ್ತು ಕೀಟಗಳನ್ನು ತಡೆಗಟ್ಟುವ ವಿಷಯದಲ್ಲಿ ತುಂಬಾ ಸಂಶೋಧನೆಯಾಗಿದೆ. ಈ ನಿಟ್ಟಿನಲ್ಲಿ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಅಡಿಯಲ್ಲಿ ಅಡಿಕೆ ಸಂಶೋಧನಾ ಕೇಂದ್ರ - ಶಿವಮೊಗ್ಗ ಮತ್ತು ತೀರ್ಥಹಳ್ಳಿಯಲ್ಲಿ ಇದೆ. ಜೊತೆಗೆ ಮೂರು ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ಸಂಶೋಧನಾ ಕೇಂದ್ರಗಳು ರೈತರಿಗೆ ಅಗತ್ಯ ಮಾಹಿತಿಯನ್ನು ನೀಡುವಲ್ಲಿ ಯಶಸ್ವಿಯಾಗಿವೆ.



ಆದರೆ ನಮಗೆ ಬೇಕಾಗಿರುವ ಸಂಶೋಧನೆ ಅಡಿಕೆ ಬೆಳೆಯಲ್ಲಿ ಮೌಲ್ಯವರ್ಧನೆ ಮತ್ತು ಸಂಸ್ಕರಣೆ ವಿಷಯದಲ್ಲಿ. ಈ ನಿಟ್ಟಿನಲ್ಲಿ ಒಂದು ಸಂಶೋಧನಾ ಕೇಂದ್ರವನ್ನು ಅಗತ್ಯವಾಗಿ ನಮ್ಮಲ್ಲಿ ಆರಂಭಿಸುವ ಅವಶ್ಯಕತೆ ಇದೆ.

ಯಾವುದೇ ಬೆಳೆಗೆ ಉತ್ತಮ ಬೆಲೆ ಬೇಕಾದರೆ ಅದರಲ್ಲಿ ಮೌಲ್ಯವರ್ಧಿತ ಉತ್ಪನ್ನಗಳು ಹೆಚ್ಚಿದ್ದರೆ ಮಾತ್ರ ಸಾಧ್ಯ. ಸದ್ಯ ಅಡಿಕೆ ಬೆಳೆಯನ್ನು ಪಾನ್ ಮಸಾಲಾ, ಗುಟ್ಕಾ, ಪೇಂಟಿಂಗ್ ಉದ್ಯಮಗಳಲ್ಲಿ ಹೆಚ್ಚಾಗಿ ಬಳಸುತ್ತಿದ್ದಾರೆ. ನಿವೇದನ್ ನೆಂಪೆರವರು ಅವಿಷ್ಕರಿಸಿರುವ ಅಡಿಕೆ ಚಹಾ ಮತ್ತು ಶಾಂಪೂ ಸ್ವಲ್ಪ ಬೆಳೆಯ ಮೌಲ್ಯವರ್ಧನೆಗೆ ಆಶಾಕಿರಣವಾಗಿದೆ. ಇವುಗಳನ್ನು ಹೊರತುಪಡಿಸಿದರೆ ಬೇರೆ ಉತ್ಪನ್ನಗಳು ನಮ್ಮಲ್ಲಿಲ್ಲ. ಈ ನಿಟ್ಟಿನಲ್ಲಿ ಅಡಿಕೆಯಿಂದ ತಯಾರಿಸಬಹುದಾದ ಮೌಲ್ಯವರ್ಧಿತ ಉತ್ಪನ್ನಗಳು ಮತ್ತು ಅವುಗಳ ಬಳಕೆಯ ಬಗ್ಗೆ ಅತಿ ಶೀಘ್ರವಾಗಿ ಒಂದು ಅಡಿಕೆ ಮೌಲ್ಯವರ್ಧನೆ ಮತ್ತು ಸಂಸ್ಕರಣ ಕೇಂದ್ರದ ಅವಶ್ಯಕತೆ ಇದೆ. ಮೈಸೂರಿನಲ್ಲಿರುವ ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯ (CFTRI) ಮಾದರಿಯಲ್ಲಿ ಒಂದು ಅಡಿಕೆ ಸಂಶೋಧನಾ ಸಂಸ್ಥೆ ಕಾರ್ಯಾರಂಭ ಮಾಡಬೇಕಿದೆ.

ಜಿಲ್ಲೆಯಲ್ಲಿರುವ ಪ್ರತಿಷ್ಠಿತ ಅಡಿಕೆ ಸಹಕಾರಿ ಮಾರುಕಟ್ಟೆ-ತುಮ್‌ಕೋಸ್ ವರ್ಷಕ್ಕೆ ನೂರಾರು ಕೋಟಿ ರೂ.ಗಳ ವಹಿವಾಟನ್ನು ಮಾಡುತ್ತಿದೆ. ಹಾಗೆಯೇ ರೈತರ ಬೆಳೆಗಳಿಗೆ ಉತ್ತಮ ಬೆಲೆ ದೊರಕಿಸಿಕೊಡುವ ನಿಟ್ಟಿನಲ್ಲಿ ಉತ್ತಮ ಕೆಲಸ ಮಾಡುತ್ತಿದೆ. ಜೊತೆಗೆ ಚನ್ನಗಿರಿ ತಾಲ್ಲೂಕಿನಲ್ಲಿ ಸುಮಾರು 35 ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಅಡಿಕೆಯನ್ನು ಬೆಳೆಯಲಾಗುತ್ತಿದೆ. ಕಳೆದ 2 ವರ್ಷಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ತೋಟಗಾರಿಕೆ ಇಲಾಖೆಯ ನೆರವಿನಿಂದ ಸುಮಾರು ಆರು ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಬೆಳೆ ಬೆಳೆಯಲು ಅವಕಾಶ ಮಾಡಿಕೊಟ್ಟಿದೆ.

ಕಳೆದೆರಡು ವರ್ಷಗಳಿಂದ ಭದ್ರೆಯ ಒಡಲು ತುಂಬಿದ್ದು, ಕೆರೆಕಟ್ಟೆಗಳಲ್ಲಿ ನೀರು ಸಂಗ್ರಹವಾಗಿ ಅಂತರ್ಜಲ ಮಟ್ಟ ಹೆಚ್ಚಾಗಿದೆ. ಹಾಗಾಗಿ ಮುಂಬರುವ ದಿನಗಳಲ್ಲಿ ಉತ್ಪಾದನೆ ಗಣನೀಯವಾಗಿ ಹೆಚ್ಚಾಗುವ ಎಲ್ಲಾ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲಿ ಬೆಲೆ ಸ್ಥಿರತೆಯನ್ನು ಕಾಪಾಡಲು ಹೆಚ್ಚಿನ ಮೌಲ್ಯವರ್ಧಿತ ಉತ್ಪನ್ನಗಳು ಇದ್ದರೆ ಮಾತ್ರ ಸಾಧ್ಯ. ಕಚ್ಚಾ ಪದಾರ್ಥಗಳಿಗೆ ಉತ್ತಮ ಮೌಲ್ಯ ದೊರಕುವುದು ಅದರ ಬಳಕೆ ಹೆಚ್ಚಾದಾಗ ಮಾತ್ರ. ಈ ನಿಟ್ಟಿನಲ್ಲಿ ಚನ್ನಗಿರಿಯಲ್ಲಿ ಮೌಲ್ಯವರ್ಧಿತ ಸಂಶೋಧನಾ ಕೇಂದ್ರವನ್ನು ತೆರೆಯಲು ಸೂಕ್ತವಾದ ಜಾಗ ವೆನಿಸುತ್ತದೆ.

ಈಗಾಗಲೇ ಅಡಿಕೆ ಬೆಳೆಗಾರರ ಹಕ್ಕೊತ್ತಾಯ ಕಾರ್ಯಕ್ರಮದಲ್ಲಿ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಅದರಲ್ಲಿ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳ ಕಾರ್ಯಾರಂಭ ಮಾಡಿರುವುದು ಉತ್ತಮ ಬೆಳವಣಿಗೆ. ಜೊತೆಗೆ ಸರ್ಕಾರ ಮನಸ್ಸು ಮಾಡಿದರೆ ಬೆಳೆಗಾರರ ಹಿತಕಾಯಲು ಅಡಿಕೆ ಬೆಳೆಯ ಮೌಲ್ಯವರ್ಧನೆ ಮತ್ತು ಸಂಸ್ಕರಣೆ, ಸಂಶೋಧನಾ ಕೇಂದ್ರವನ್ನು ತೆರೆಯಲು ಕಷ್ಟವೇನಲ್ಲ.

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ- ಶಿವಮೊಗ್ಗ, ತೋಟಗಾರಿಕೆ ವಿಶ್ವವಿದ್ಯಾಲಯ - ಬಾಗಲಕೋಟೆ, ರಾಜ್ಯ ತೋಟಗಾರಿಕೆ ಇಲಾಖೆ, ಕೇಂದ್ರ ತೋಟಗಾರಿಕೆ ಬೆಳೆಗಳ ಸಂಶೋಧನಾ ಸಂಸ್ಥೆ ಕಾಸರಗೋಡು, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಹೆಸರಘಟ್ಟ ಇವುಗಳಲ್ಲಿನ ಹಿರಿಯ ವಿಜ್ಞಾನಿಗಳನ್ನು ಹಾಗೂ ಅಧಿಕಾರಿಗಳ ತಂಡಗಳನ್ನು ರಚಿಸಿ ಇದರ ಬಗ್ಗೆ ಅಧ್ಯಯನ ನಡೆಸಿ ವರದಿಯನ್ನು ಸರ್ಕಾರ ಪಡೆದರೆ ಮುಂದಿನ ವರ್ಷವೇ ಸಂಶೋಧನಾ ಸಂಸ್ಥೆಯನ್ನು ಪ್ರಾರಂಭ ಮಾಡಬಹುದು.

ಈ ನಿಟ್ಟಿನಲ್ಲಿ ಮೂರೂ ಜಿಲ್ಲೆಗಳ ಚುನಾಯಿತ ಜನಪ್ರತಿನಿಧಿಗಳು ಎಲ್ಲಾ ಸಹಕಾರ ನೀಡುವ ಭರವಸೆಯನ್ನು ನೀಡಿರುತ್ತಾರೆ. ಅವರ ಮಾರ್ಗದರ್ಶನದಲ್ಲಿ ಈ ಬೇಡಿಕೆ ಈಡೇರಿದರೆ ಖಂಡಿತಾ ಅಡಿಕೆ ಬೆಳೆಗಾರರಿಗೆ ಇದು ಒಂದು ವರದಾನವಾಗುವುದು ಎಂದರೆ ತಪ್ಪಾಗುವುದಿಲ್ಲ...

- ಎಂ.ಜಿ. ಬಸವನಗೌಡ
ತೋಟಗಾರಿಕೆ ವಿಜ್ಞಾನಿಗಳು
ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ.

# ಇಟ್ಟಿಗೆ ಭಟ್ಟಿಗಳಲ್ಲಿದ್ದ 67 ವಿದ್ಯಾರ್ಥಿಗಳು ಶಾಲೆಗೆ ದಾಖಲು

ಹರಿಹರ, ಜ. 20 - ಹರಿಹರದ ಗುತ್ತೂರಿನ ಹೊರವಲಯದ ಉಡಸಲಮ್ಮ ದೇವಸ್ಥಾನದ ಆವರಣದಲ್ಲಿ ಬುಧವಾರದಂದು ತಾಲ್ಲೂಕು ಆಡಳಿತದಿಂದ ಇಟ್ಟಿಗೆ ಭಟ್ಟಿ ಮಾಲೀಕರಿಗೆ ಮತ್ತು ಕಾರ್ಮಿಕರಿಗೆ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಬಗ್ಗೆ ಅರಿವು ಮತ್ತು ನೆರವು ಕಾರ್ಯಕ್ರಮ ನಡೆಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ.ಸಿದ್ದಪ್ಪ ಮಾತನಾಡಿ, ಇಟ್ಟಿಗೆ ಭಟ್ಟಿಗಳಿಗೆ ಉತ್ತರ ಕರ್ನಾಟಕದಿಂದ ಕಾರ್ಮಿಕರು ಕುಟುಂಬ ಸಮೇತ ವಲಸೆ ಬರುತ್ತಾರೆ. ಇದರಿಂದ ಮಕ್ಕಳ ಶಿಕ್ಷಣ ಅರ್ಧಕ್ಕೆ ಮೊಟಕುಗೊಳ್ಳುವ ಆತಂಕವಿದೆ. ಈ ದಿಸೆಯಲ್ಲಿ ತಾಲ್ಲೂಕು ಶಿಕ್ಷಣ ಇಲಾಖೆಯಿಂದ ಇಟ್ಟಿಗೆ ಭಟ್ಟಿಗಳ ಸಮೀಕ್ಷಾ ಕಾರ್ಯ ನಡೆಸಿ ಶಾಲೆ ಬಿಟ್ಟ ಮಕ್ಕಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ ಎಂದು ಹೇಳಿದರು.

ಸಮೀಕ್ಷೆ ಪ್ರಕಾರ ಗುತ್ತೂರಿನಲ್ಲಿ 27, ಸಾರಥಿ 8, ಪಾಮೇನಹಳ್ಳಿ 12, ಹಲಸಬಾಳು 14, ತಿಮ್ಮಲಾಪುರ 3, ಹರಗನಹಳ್ಳಿ ಗ್ರಾಮದ ಸುತ್ತಲು 3 ಸೇರಿ ಒಟ್ಟು 67 ವಿದ್ಯಾರ್ಥಿಗಳು ಶಾಲೆ ಬಿಟ್ಟಿದ್ದಾರೆ. ಈ ಎಲ್ಲಾ ಮಕ್ಕಳನ್ನು ಸಮೀಪದ ಗ್ರಾಮಗಳ ಶಾಲೆಗಳಲ್ಲಿ ವಯಸ್ಸು ಆಧರಿಸಿ ದಾಖಲಾತಿ ಮಾಡಿಸಲಾಗಿದೆ ಎಂದರು.



ಹರಿಹರ : ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ

ಕಾರ್ಮಿಕ ನಿರೀಕ್ಷಕ ಪ್ರಸನ್ನಕುಮಾರ್ ಮಾತನಾಡಿ, 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸುವುದು ಹಾಗೂ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಇಂತಹ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡ ಮಾಲಿಕರಿಗೆ 20 ರಿಂದ 50 ಸಾವಿರ ರೂ. ದಂಡ, 6 ತಿಂಗಳಿಂದ 2 ವರ್ಷದವರೆಗೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಶರಣ ಕುಮಾರ ಹೆಗಡೆ ಮಾತನಾಡಿ, ಬೆಂಗಳೂರಿನ ಮಾರುತಿ ಮೆಡಿಕಲ್ಸ್ ಮಾಲೀಕ ಮಹೇಂದ್ರ ಮುಣೋತ್ ಎಂಬುವರು ಈಗಾಗಲೇ 24 ಸಾವಿರ ನೋಟ್ ಪುಸ್ತಕಗಳನ್ನು ನೀಡಿದ್ದು ಅದನ್ನು ತಾಲ್ಲೂಕಿನ ವಿವಿಧ ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ವಿತರಿಸಲಾಗಿದೆ ಎಂದರು.

ಜೊತೆಗೆ ಈ ಇಟ್ಟಿಗೆ ಭಟ್ಟಿ ಮಕ್ಕಳಿಗೂ ಇವರಿಂದಲೇ ಸರಬರಾಜು ಮಾಡಿದ ನೋಟ್ ಪುಸ್ತಕ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಲಾಗಿದೆ. ಮತ್ತಷ್ಟು ದಾನಿಗಳನ್ನು ಸಂಪರ್ಕಿಸಿ ಬ್ಯಾಗ್, ಸಮವಸ್ತ್ರ, ಲೇಖನ ಸಾಮಗ್ರಿಗಳನ್ನು ಶೀಘ್ರದಲ್ಲೇ ಒದಗಿಸಲಾಗುವುದೆಂದರು.

ಉಪ ತಹಸೀಲ್ದಾರ್ ಶಶಿಧರಯ್ಯ, ನಗರಸಭೆ ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ, ಸ್ಥಳೀಯ ಕಾರ್ಮಿಕ ನಿರೀಕ್ಷಕಿ ಕವಿತ, ಸಿಡಿಪಿಓ ನಿರ್ಮಲ, ಎಸಿಡಿಪಿಓ ಪ್ರಿಯದರ್ಶಿನಿ, ಬಿಆರ್‌ಸಿ ಜಗದೀಶ್, ಪಿಡಿಓ ವಿಜಯಲಕ್ಷ್ಮಿ, ಇಟ್ಟಿಗೆ ಭಟ್ಟಿ ಮಾಲಿಕರು ಉಪಸ್ಥಿತರಿದ್ದರು.

# ಮಾನವ ದೇಹಕ್ಕೆ ಹಂದಿ ಕಿಡ್ನಿ ಕಸಿ

ನ್ಯೂಯಾರ್ಕ್, ಜ. 20 – ಅಮೆರಿಕದ ಅಲಬಾಮಾದ ವಿಜ್ಞಾನಿಗಳು ಮೆದುಳು ನಿಷ್ಕ್ರಿಯೆಗೊಂಡ ವ್ಯಕ್ತಿಯೊಬ್ಬರಿಗೆ ಕುಲಾಂತರಿ ಹಂದಿಯ ಕಿಡ್ನಿ ಜೋಡಿಸುವ ಪ್ರಯೋಗದಲ್ಲಿ ಮಹತ್ವದ ಯಶಸ್ಸು ಕಂಡಿದ್ದಾರೆ.



ಅಮೆರಿಕದ ವಿಜ್ಞಾನಿಗಳಿಗೆ ಮಹತ್ವದ ಯಶಸ್ಸು

ಮೆದುಳು ನಿಷ್ಕ್ರಿಯೆಗೊಂಡ ದೇಹವನ್ನು ಅವರ ಕುಟುಂಬದವರು ದಾನವಾಗಿ ನೀಡಿದ್ದರು. ವ್ಯಕ್ತಿಯ ಮೆದುಳು ನಿಷ್ಕ್ರಿಯೆಗೊಂಡ ನಂತರ ದೇಹವನ್ನು ಜೀವನಾಧಾರ ವ್ಯವಸ್ಥೆಯಲ್ಲಿ ಇರಿಸಲಾಗಿತ್ತು.

ಆಗ ಹಂದಿಯ ಕಿಡ್ನಿಯನ್ನು ಮೆದುಳು ನಿಷ್ಕ್ರಿಯೆಗೊಂಡ ವ್ಯಕ್ತಿಗೆ ಅಳವಡಿಸಲಾಗಿತ್ತು. ಕಿಡ್ನಿಯನ್ನು ದೇಹ ತಿರಸ್ಕರಿಸಲಿಲ್ಲ. ದೇಹವನ್ನು ಜೀವನಾಧಾರದಿಂದ ತೆಗೆಯುವ ಮೂರು ದಿನಗಳವರೆಗೂ ಹಂದಿಯ ಅವಳಿ ಕಿಡ್ನಿಗಳು ಕಾರ್ಯ ನಿರ್ವಹಿಸುತ್ತಿದ್ದವು ಎಂದು ಅಮೆರಿಕನ್ ಜರ್ನಲ್ ಆಫ್ ಟ್ರಾನ್ಸ್‌ಪ್ಲಾಂಟೇಷನ್ ನಿಯತ ಕಾಲಿಕದಲ್ಲಿ ಪ್ರಕಟಿಸಲಾಗಿದೆ.

ಈ ಬಗ್ಗೆ ಮಾತನಾಡಿರುವ ಬರ್ಮಿಂಗ್‌ಹ್ಯಾಮ್‌ನಲ್ಲಿರುವ ಅಲಬಾಮಾ ವಿಶ್ವವಿದ್ಯಾನಿಲಯದ ಡಾ. ಜೈಮೆ ಲಾಕೆ, ಅಂಗಾಂಗ ಕೊರತೆ ಬಗೆಹರಿಸಲಾಗದ ಸಮಸ್ಯೆಯಾಗಿತ್ತು. ಈ ಸಮಸ್ಯೆಗೆ ನಮಗೆ ಎಂದೂ ನಿಜವಾದ ಪರಿಹಾರ ದೊರೆತಿಲ್ಲ ಎಂದಿದ್ದಾರೆ.

ಅಂಗಾಂಗ ಕೊರತೆ ನಿವಾರಿಸುವ ಸಲುವಾಗಿ, ಇತ್ತೀಚಿನ ದಿನಗಳಲ್ಲಿ ಪ್ರಾಣಿಗಳ ಅಂಗಗಳನ್ನು ಮನುಷ್ಯರಿಗೆ ಅಳವಡಿಸುವ ಪ್ರಯೋಗಗಳು ಚುರುಕು ಪಡೆದುಕೊಂಡಿವೆ. ಮೇರಿ ಲ್ಯಾಂಡ್ ವಿಶ್ವವಿದ್ಯಾನಿಲಯದ ಮೆಡಿಕಲ್ ಸೆಂಟರ್‌ನಲ್ಲಿ ಸಾವನ್ನಪ್ಪುತ್ತಿದ್ದ ವ್ಯಕ್ತಿಯೊಬ್ಬರಿಗೆ ಕುಲಾಂತರಿ ಹಂದಿಯ ಹೃದಯವನ್ನು ಜೋಡಣೆ ಮಾಡಲಾಗಿತ್ತು. ಇದು ವ್ಯಕ್ತಿಯನ್ನು ಜೀವಂತವಾಗಿಟ್ಟಿದೆ. ಆದರೆ, ರೋಗಿಯ ಜೀವಕ್ಕೆ ಹಾನಿ ತರದೆ ಈ ರೀತಿಯ ಶಸ್ತ್ರಚಿಕಿತ್ಸೆ ಮಾಡುವ ಮುಂಚೆ ಸಾಕಷ್ಟು ವಿಷಯಗಳನ್ನು ವಿಜ್ಞಾನಿಗಳು ತಿಳಿಯಬೇಕಿದೆ.

ಪ್ರಾಣಿಗಳ ಅಂಗಗಳನ್ನು ಮನುಷ್ಯರಿಗೆ ಕಸಿ ಮಾಡುವುದನ್ನು ಕ್ಸೆನೊಟ್ರಾನ್ಸ್‌ಪ್ಲಾಂಟೇಷನ್ ಎಂದು ಕರೆಯಲಾಗುತ್ತದೆ. ದಶಕಗಳಿಂದ ಈ ದಿಸೆಯಲ್ಲಿ ಪ್ರಯತ್ನಗಳು ನಡೆಯುತ್ತಿದ್ದವು. ಆದರೆ, ಇಂತಹ ಪ್ರಯತ್ನ ನಡೆಸಿದಾಗ, ಮನುಷ್ಯ ದೇಹದ ರೋಗ ನಿರೋಧಕ ವ್ಯವಸ್ಥೆ ದಾಳಿ ನಡೆಸಿ ಪ್ರಾಣಿ ಅಂಗಗಳನ್ನು ನಿಷ್ಕ್ರಿಯೆಗೊಳಿಸುತ್ತಿತ್ತು.

ವಿಜ್ಞಾನಿಗಳು ಈಗ ಹಂದಿಯ ಜೀನ್‌ಗಳನ್ನು ತಿದ್ದುವ ಮೂಲಕ, ಅವು ಮನುಷ್ಯರ ಅಂಗಗಳನ್ನು ಹೋಲುವಂತೆ ಪರಿವರ್ತಿಸುತ್ತಿದ್ದಾರೆ.

ಆದರೆ, ಹಂದಿಗಳ ಅಂಗಗಳು ಎಷ್ಟು ಕಾಲ ಮನುಷ್ಯರಲ್ಲಿ ಉಳಿಯಬಲ್ಲವು ಎಂಬುದಕ್ಕೆ ಮತ್ತು ಎಷ್ಟರ ಮಟ್ಟಿಗೆ ಹಂದಿಗಳ ಅಂಗಗಳ ಜೀನ್ ಬದಲಿಸಬಹುದು ಎಂಬ ಪ್ರಶ್ನೆಗಳಿಗೆ ಇನ್ನೂ ಉತ್ತರ ಸಿಗಬೇಕಿದೆ.

# ಒಂದು ವರ್ಷದಲ್ಲಿ ಎವಿಜಿಸಿ ನೀತಿ ಜಾರಿಗೆ

ಬೆಂಗಳೂರು, ಜ.20- ಡಿಜಿಟಲ್ ಮನೋರಂಜನಾ ಕ್ಷೇತ್ರವು ಅಗಾಧವಾಗಿ ಬೆಳೆಯುತ್ತಿದ್ದು, ಒಂದು ವರ್ಷದಲ್ಲಿ ನೂತನ 'ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ ನೀತಿ' (ಎವಿಜಿಸಿ ಪಾಲಿಸಿ)ಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗುವುದು ಎಂದು ಐಟಿ, ಬಿಟಿ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

ಇಲ್ಲಿನ ಮಹದೇವಪುರದಲ್ಲಿ ದೇಶದ ಪ್ರಪ್ರಥಮ ಮತ್ತು ಏಷ್ಯಾದ ಅತಿದೊಡ್ಡ 'ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ ಉತ್ಕೃಷ್ಟತಾ ಕೇಂದ್ರ'ಕ್ಕೆ (ಎವಿಜಿಸಿ ಸೆಂಟರ್ ಆಫ್ ಎಕ್ಸಲೆನ್ಸ್) ಇಂದು ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯದಲ್ಲಿ 'ಡಿಜಿಟಲ್ ಮಾಧ್ಯಮ ಮನೋರಂಜನಾ ಪ್ರದೇಶ'ವನ್ನು ಕೂಡ ಇನ್ನು ಒಂದು ವರ್ಷದಲ್ಲಿ ಮಹದೇವಪುರದ ಸಮೀಪವೇ ಸ್ಥಾಪಿಸಲಾಗುವುದು. ಇದಕ್ಕೆ ಅಗತ್ಯ ಭೂಮಿಯನ್ನು ಗುರುತಿಸುವಂತೆ ಕೈಗಾರಿಕಾ ಇಲಾಖೆಗೆ ಸೂಚಿಸಲಾಗುವುದು ಎಂದರು.

ಇದರೊಂದಿಗೆ, ರಾಜ್ಯವು ಎವಿಜಿಸಿ ವಲಯದಲ್ಲಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಿದ ಮೊಟ್ಟಮೊದಲ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ರಾಜ್ಯವು 2012ರಲ್ಲೇ ಎವಿಜಿಸಿ ನೀತಿ ಯನ್ನು ಜಾರಿಗೆ ತಂದ ಹಿರಿಮೆಯನ್ನು ಕೂಡ ಹೊಂದಿರುವುದನ್ನು ಇಲ್ಲಿ ನೆನೆಯಬಹುದು. ಈ ಉತ್ಕೃಷ್ಟತಾ ಕೇಂದ್ರವನ್ನು 'ಅಭಯ್' ಸಂಸ್ಥೆಯು (ಹಿಂದಿನ 'ಅಸೋಸಿಯೇಷನ್ ಆಫ್ ಬೆಂಗಳೂರು ಅನಿಮೇಷನ್ ಇಂಡಸ್ಟ್ರಿ') ನಿರ್ವಹಿಸಲಿದೆ.

ಈ ಉತ್ಕೃಷ್ಟತಾ ಕೇಂದ್ರದೊಂದಿಗೆ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳೆಲ್ಲವೂ ಒಡಂಬಡಿಕೆ ಮಾಡಿಕೊಳ್ಳುವಂತೆ ಮಾಡಲಾಗುವುದು. ಇದರ ಜೊತೆಗೆ ರಾಜ್ಯದ ವಿ.ವಿ.ಗಳಲ್ಲಿ ಸಣ್ಣ ಪ್ರಮಾಣದ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇದರಿಂದ ವಿದ್ಯಾರ್ಥಿಗಳ ಕಲಿಕೆಯನ್ನು ಹೆಚ್ಚು ಆಸಕ್ತಿಕರಗೊಳಿಸಿ, ಹೆಚ್ಚು ಹೆಚ್ಚು ವಿದ್ಯಾರ್ಥಿಗಳಿಗೆ ಜಾಗತಿಕ ಗುಣಮಟ್ಟದ ಶಿಕ್ಷಣ ಒದಗಿಸಬಹುದು ಎಂದು ಸಚಿವರು ಹೇಳಿದರು.

# ಕನ್ನಡ ಕೃತಿಗಳ ಆಹ್ವಾನ

ದಾವಣಗೆರೆ, ಜ. 20- ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ, ಜನವರಿ ಯಿಂದ ಡಿಸೆಂಬರ್ 2021ರ ಅವಧಿಯಲ್ಲಿ ಕನ್ನಡದಲ್ಲಿ ಪ್ರಕಟವಾದ ಕೃತಿಗಳಿಗೆ, ಅವುಗಳ ಮುದ್ರಣ, ಮುಖಪುಟ ವಿನ್ಯಾಸ, ಗುಣಮಟ್ಟವನ್ನು ಪರಿಗಣಿಸಿ ವಿವಿಧ ಬಹುಮಾನಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಯ್ಕೆಯಾದ ಕೃತಿಗಳ ಪ್ರಕಾಶಕರು, ಮುದ್ರಕರು, ಕಲಾವಿದರಿಗೆ 'ಕನ್ನಡ ಪುಸ್ತಕ ಸೊಗಸು-2021' ಬಹುಮಾನ ನೀಡಲಾಗುವುದು. ಫೆಬ್ರವರಿ 10ರ ಒಳಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560002–ಈ ವಿಳಾಸಕ್ಕೆ ಕಳುಹಿಸಿ ಕೊಡಬಹುದಾಗಿದೆ. ಹೆಚ್ಚಿನ ಮಾಹಿತಿಗೆ 080-22484516, 22107704 ಸಂಪರ್ಕಿಸಬಹುದು.

# ವಿಕಲಚೇತನರಿಗೆ ಪರಿಕರ : ಅರ್ಜಿ ಆಹ್ವಾನ

ದಾವಣಗೆರೆ, ಜ.20- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಜಿಲ್ಲಾ ಪಂಚಾಯಿತಿ ಅನುದಾನದಡಿ ವಿವಿಧ ರೀತಿಯ ಅರ್ಹ ವಿಕಲಚೇತನರಿಗೆ ಪರಿಕರಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ವಿಕಲಚೇತನರ ಸಹಾಯವಾಣಿ ಮತ್ತು ಮಾಹಿತಿ ಸಲಹಾ ಕೇಂದ್ರ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಚೇರಿ, ಶಂಕರಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ಅಥವಾ ದೂರವಾಣಿ ಸಂಖ್ಯೆ : 08192-263936, 08192-263939 ಇಲ್ಲಿ ಸಂಪರ್ಕಿಸಬಹುದು.

# ವೇಮನ ಶ್ರೀಗಳು ಸಂತರಾಗಿ, ಸರಳರಾಗಿ ಮಾದರಿ



ಹರಿಹರ : ವೇಮನ ಶ್ರೀಗಳ 610 ನೇ ಜಯಂತಿ ಸಮಾರಂಭದಲ್ಲಿ ಶಾಸಕ ಎಸ್. ರಾಮಪ್ಪ

ಹರಿಹರ, ಜ.20 - ನಾಡಿನ ಸರ್ವ ಜನಾಂಗದ ಒಳಿತಿಗಾಗಿ ಶ್ರೀ ವೇಮಾನಂದ ಶ್ರೀಗಳ ಕೊಡುಗೆ ಅಪಾರವಾಗಿದ್ದು, ಅವರ ಆದರ್ಶಗಳನ್ನು ಯುವಕರು ಮೈಗೂಡಿಸಿಕೊಂಡು ಹೋಗುವಂತೆ ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಡೆದ ವೇಮನ ಶ್ರೀಗಳ 610 ನೇ ಜಯಂತಿ ಸಮಾರಂಭದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಜನ ಸಾಮಾನ್ಯರ ಕವಿಯಾದ ಯೋಗಿ ವೇಮನರು ಜಾತೀಯತೆ, ಅಂಧ ಶ್ರದ್ಧೆ, ಮೇಲು-ಕೀಳುಗಳ ತಾರತಮ್ಯದ ಬಗ್ಗೆ ತಮ್ಮ ಕಾವ್ಯದ ಮೂಲಕ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿದ್ದರು ಎಂದರು.

ಅವರು ಸಂತರಾಗಿ ಬೆಳೆದು ಸರಳತೆಯಿಂದ ಬದುಕಿ ಮಾದರಿ ಎನಿಸಿದರು. ಬುದ್ದನ ಕರುಣೆ, ಅಂಬೇಡ್ಕರ್ ಅವರ ಸಮಾನತೆ, ಕಬೀರರ ಧಾರ್ಮಿಕ ಸೌಹಾರ್ದತೆ, ಬಸವಣ್ಣ ಮತ್ತು ಕುವೆಂಪು ಅವರ ವಿಶ್ವ ಮಾನವ ಸಂದೇಶ ಮುಂತಾದವುಗಳು ವೇಮನರ ಕಾವ್ಯದಲ್ಲಿ ಇವೆ. ಆದರೂ ಅವುಗಳಿಗೆ ಸಿಗಬೇಕಾದ ಪ್ರಚಾರ ಸಿಗಲಿಲ್ಲ, ಇದಕ್ಕೆ ರಾಜಕೀಯ ವಲಯದ ತಾರತಮ್ಯದ ಧೋರಣೆ ಕಾರಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಎಪಿಎಂಸಿ ಸದಸ್ಯ ರಡ್ಡಿ ಹನುಮಂತಪ್ಪ, ಮಂಜುನಾಥ್ ರಡ್ಡಿ, ಕೊಟ್ರೇಶ್ ರಡ್ಡಿ, ವಿಷ್ಣು ರಡ್ಡಿ, ಶಿವಣ್ಣ ರಡ್ಡಿ, ಬಸಪ್ಪ ರಡ್ಡಿ, ದಿವಾಕರ, ಗಿರಿಯಪ್ಪ ರಡ್ಡಿ, ಕುರುಬ ಸಮಾಜದ ಅಧ್ಯಕ್ಷ ಕೆ. ಜಡಿಯಪ್ಪ, ಮಲೆಬೆನ್ನೂರು ಗಂಗಾಧರ್ ಮತ್ತಿತರರು ಉಪಸ್ಥಿತರಿದ್ದರು.


**ಮಾನ್ಯ ಘನ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಿರಿಯ ವಿಭಾಗ, ದಾವಣಗೆರೆ.**

ಪಿ ಆಂಡ್ ಎಸ್‌ಸಿ ದಾವೆ ನಂ. 2/2022

ಅರ್ಜಿದಾರರು : **1. ಶ್ರೀಮತಿ ಸಿ.ಎಸ್. ಗೀತಾಲಕ್ಷ್ಮಿ** ಕೋಂ ಸಿ.ವಿ. ಸರ್ವೋತ್ತಮ, ವಯಸ್ಸು ಸುಮಾರು 71 ವರ್ಷ, ಉದ್ಯೋಗ : ಗೃಹಿಣಿ

**2. ಶ್ರೀಮತಿ ಸಿ.ಎಸ್. ಪೂಜಾ ಕೋಂ ಮಹೇಶ್**, ವಯಸ್ಸು : ಸುಮಾರು 34 ವರ್ಷ, ಉದ್ಯೋಗ : ಖಾಸಗಿ ಕಂಪನಿ, ಇಬ್ಬರ ವಾಸ ; ನಂ. 705, ಶಿವರಾಂ ಕುಟೀರ, ಎಸ್.ಕೆ.ಪಿ. ದೇವಸ್ಥಾನದ ರಸ್ತೆ, ದಾವಣಗೆರೆ ಸಿಟಿ. ವಿರುದ್ಧ

ಎದುರುದಾರರು : ಯಾರೂ ಇಲ್ಲ.

**ಸಾರ್ವಜನಿಕ ಪ್ರಕಟಣೆ**

ಅರ್ಜಿದಾರರು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ವಾರಸುದಾರರ ಸರ್ಟಿಫಿಕೇಟ್ ದಾಖಲೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ. 1ನೇ ಅರ್ಜಿದಾರರ ಪತಿಯಾದ ಶ್ರೀಯುತ ಸರ್ವೋತ್ತಮ ಇವರು ಮೃತರಾಗಿದ್ದು, ಅವರ ಹೆಸರಿನಲ್ಲಿ ಮಹೇಂದ್ರ ಕೋಟಕ್ ಬ್ಯಾಂಕ್‌ನಲ್ಲಿ 440 ಷೇರುಗಳು ಇರುತ್ತವೆ. ಅವುಗಳನ್ನು ಅರ್ಜಿದಾರರು ಬಿಡಿಸಿಕೊಳ್ಳುವ ಸಲುವಾಗಿ ಮೃತ ಸರ್ವೋತ್ತಮ ಇವರ ವಾರಸುದಾರರೆಂದು ದಾಖಲೆ ಪಡೆಯುವುದಕ್ಕೋಸ್ಕರ ಸಲ್ಲಿಸಿರುತ್ತಾರೆ. ಸಾರ್ವಜನಿಕರ ಯಾವುದೇ ತಂಟೆ-ತಕರಾರು ಇದ್ದರೆ, ದಿನಾಂಕ : 24.02.2022ರಂದು ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಂಟೆ, ತಕರಾರನ್ನು ತಿಳಿಸಬಹುದಾಗಿರುತ್ತದೆ. ತಪ್ಪಿದ್ದಲ್ಲಿ ನ್ಯಾಯಾಲಯದಲ್ಲಿ ಇರುವ ದಾಖಲೆಗಳ ಆಧಾರದ ಮೇಲೆ ಘನ ನ್ಯಾಯಾಲಯವು ಏಕತರ್ಫಿಯವಾಗಿ ತೀರ್ಮಾನವನ್ನು ಕೈಗೊಳ್ಳುವುದು ತಿಳಿಯಿರಿ.

ದಿನಾಂಕ : 19.01.2022ರಂದು ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ಕೊಡಲಾಗಿದೆ.

ಸಹಿ/- ಅರ್ಜಿದಾರರ ಪರ ವಕೀಲರು
ಶ್ರೀಮತಿ ಶಶಿಕಲ ಎಂ.ಎನ್.
ಶ್ರೀ ಸಂಗಪ್ಪ ಡಿ.ಎನ್.,
ಸ್ಥಳ : ದಾವಣಗೆರೆ. ದಿನಾಂಕ : 19.1.2022

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು,
ಪ್ರಧಾನ ಹಿರಿಯ ಸಿವಿಲ್ &
ಸಿ.ಜೆ. ಎಂ. ನ್ಯಾಯಾಲಯ, ದಾವಣಗೆರೆ.



**ಅಭಿನಂದನೆಗಳು**



ದಿನಾಂಕ : 26-12-2021ರ ಭಾನುವಾರ ದಂದು **"ಭಾರತ ವಿಕಾಸ ಪರಿಷತ್"** ಹಮ್ಮಿಕೊಂಡಿದ್ದ **"ಭಾರತ್ ಕೋ ಜಾನೋ"** ಲಿಖಿತ ರಸಪ್ರಶ್ನೆ ಸ್ಪರ್ಧೆಯಲ್ಲಿ

**ಮಾಗನೂರು ಬಸಪ್ಪ ಪಬ್ಲಿಕ್ ಶಾಲೆಯಲ್ಲಿ**

7ನೇ ತರಗತಿಯಲ್ಲಿ ಓದುತ್ತಿರುವ **ಕು. ಪೂಜಾ ಪಾಟೀಲ್** ಪ್ರಥಮ ಸ್ಥಾನ ಪಡೆದು, **ದಿನಾಂಕ 04-01-2022ರ ಮಂಗಳವಾರದಂದು ನಡೆದ ವಲಯ ಮಟ್ಟದಲ್ಲಿಯೂ ಪ್ರಥಮ ಸ್ಥಾನ ಪಡೆದು, 09-01-2022ರ ಭಾನುವಾರ ನಡೆದ ದಕ್ಷಿಣ ಭಾರತ ಪ್ರಾಂತೀಯ ಮತ್ತು ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು, ದಿನಾಂಕ 22-01-2022 ರ ಶನಿವಾರ ದಂದು ಉತ್ತರ ಪ್ರದೇಶದ ಕಾನ್ಪುರದಲ್ಲಿ ನಡೆಯುವ ರಾಷ್ಟ್ರಮಟ್ಟಕ್ಕೆ** ಆಯ್ಕೆಯಾಗಿರುವುದು ಮಾಗನೂರು ಬಸಪ್ಪ ವಿದ್ಯಾಸಂಸ್ಥೆಗೆ ಸಂತಸ ತಂದಿದೆ. ನಮ್ಮ ಸಂಸ್ಥೆಯ ಹೆಮ್ಮೆಯ ವಿದ್ಯಾರ್ಥಿ, ರಾಷ್ಟ್ರಮಟ್ಟದಲ್ಲಿಯೂ ಪ್ರಥಮ ಸ್ಥಾನ ಪಡೆಯಲಿ ಎಂದು ಅಭಿನಂದಿಸುತ್ತೇವೆ.

ಶುಭ ಕೋರುವವರು
ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳವರು
ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟಿನ
ಆಡಳಿತ ಮಂಡಳಿ, ಮುಖ್ಯಸ್ಥರುಗಳು ಮತ್ತು ಸಿಬ್ಬಂದಿ ವರ್ಗ.

## ಹರಿಹರ ತಾಲ್ಲೂಕು ಕುರುಹಿನಶೆಟ್ಟಿ ಸಮಾಜಕ್ಕೆ ಬಸವರಾಜ್ ಅಧ್ಯಕ್ಷ



ಹರಿಹರ, ಜ. 20- ಇಲ್ಲಿನ ಕುರುಹಿನಶೆಟ್ಟಿ ಸಮಾಜದ ನೂತನ ಪದಾಧಿಕಾರಿಗಳ ಕಾರ್ಯಕಾರಿ ಸಮಿತಿಯನ್ನು ಸಮಾಜದ ಕುಲದೇವರಾದ ಶ್ರೀ ನೀಲಕಂಠೇಶ್ವರ ದೇವಸ್ಥಾನದಲ್ಲಿ ಸರ್ವಸದಸ್ಯರ ಸಮ್ಮುಖದಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಬಸವರಾಜ್ ಇಂಡಿ, ನಾಗರಾಜ್ ಭಂಡಾರಿ, ದೇವೇಂದ್ರಪ್ಪ ಮಾಳ್ಯ, ಗೌರವಾಧ್ಯಕ್ಷರಾಗಿ, ಉಪಾಧ್ಯಕ್ಷರನ್ನಾಗಿ ಪುಟ್ಟಪ್ಪ ಬುಟ್ಟಾ, ನಾಗರಾಜ್ ಬುಟ್ಟಾ, ಪ್ರಧಾನ ಕಾರ್ಯದರ್ಶಿಯಾಗಿ ಚಂದ್ರಶೇಖರ್ ಅಮ್ರುದ್, ಸಹ ಕಾರ್ಯದರ್ಶಿಯಾಗಿ ಮಂಜುನಾಥ್ ಗಡ್ಡದ್, ಖಜಾಂಚಿಯಾಗಿ ನಿಂಗರಾಜ್ ದಾವಣಗೆರೆ, ಜಂಟಿ ಖಜಾಂಚಿಯಾಗಿ ರಾಜು ಐರಣಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರುಗಳಾಗಿ ಹನುಮಂತ ಐರಣಿ, ಚಂದ್ರಪ್ಪ ಭಂಡಾರಿ, ಶ್ರೀನಿವಾಸ್ ಚಾಕಣಿ, ಗಂಗಾಧರ್ ದಾವಣಗೆರೆ, ರಾಘವೇಂದ್ರ ಬಳ್ಳಾರಿ, ಗೌರವ ಸಲಹೆಗಾರರಾಗಿ ಅಣ್ಣಪ್ಪ ಶ್ಯಾವಿ, ಶ್ರೀನಿವಾಸ್ ಇಂಡಿ, ಜಗನ್ನಾಥ್ ಬುಟ್ಟಾ ನೇಮಕವಾಗಿದ್ದಾರೆ.

## ದಾನ ಮಾಡಿದಾಗ ಬದುಕಿಗೆ ಅರ್ಥ



ಮಲೇಬೆನ್ನೂರು, ಜ.20- ಮನುಷ್ಯ ತನ್ನಲ್ಲಿ ಉಳಿದಿರುವ ಹೆಚ್ಚುವರಿ ವಸ್ತುಗಳನ್ನು ಮತ್ತು ಹಣವನ್ನು ಪರರಿಗೆ ದಾನ ಮಾಡಿದಾಗ ಮಾತ್ರ ಬದುಕಿಗೆ ಅರ್ಥ ಬರುತ್ತದೆ ಎಂದು ಕನ್ನಡ ಪರ ಹೋರಾಟಗಾರ ಎಕ್ಕೆಗೊಂದಿ ಎಚ್.ಬಿ.ರುದ್ರಗೌಡ ಅಭಿಪ್ರಾಯಪಟ್ಟರು.

ಧೂಳೆಹೊಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಬೆಂಗಳೂರಿನ ಕೃತಜ್ಞತಾ ಟ್ರಸ್ಟ್ ನೀಡಿದ ನೋಟ್‌ಬುಕ್ ಮತ್ತು ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಅವರು ಮಾತನಾಡಿದರು. ದಾನ ಮಾಡಿದಾಗ ಎಡಗೈ ಗೆ ತಿಳಿಯಬಾರದು ಎಂದು ಹಿರಿಯರು ಹೇಳುತ್ತಾರೆ. ದಾನದಿಂದ ಬೇರೆಯವರ ಮಾತು ಕೇಳಿದಾಗ ನಮಗೆ ನೆಮ್ಮದಿ, ಖುಷಿ ಕೊಡುತ್ತದೆ ಎಂದರು.

ಶಿಕ್ಷಕ ಡಿ.ಎಂ. ಮಂಜುನಾಥಯ್ಯ ಮಾತನಾಡಿ, ಯಾವುದೇ ಕಾಯಕದಲ್ಲಿ ಪ್ರಾಮಾಣಿಕತೆಯಿದ್ದಲ್ಲಿ ತಿಳಿಯದೇ ಫಲ ದೊರಕುತ್ತದೆ ಎಂದರು.

ಟ್ರಸ್ಟ್‌ನ ಸುನೀಲ್, ಮುಖ್ಯ ಶಿಕ್ಷಕ ಬಸಪ್ಪ, ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್‌ಕುಮಾರ್ ಹೆಗಡೆ, ಎಸ್‌ಡಿಎಂಸಿ ಅಧ್ಯಕ್ಷ ನಿಜಲಿಂಗಪ್ಪ, ಸದಸ್ಯರಾದ ಸಿದ್ದನಗೌಡ, ರಾಮನಗೌಡ, ಶಿಕ್ಷಕರಾದ ಉಮೇಶ್, ಮಂಗಳಾ, ಹೇಮಾ, ರಶ್ಮಿ, ಲೈಕಾಬಾನು, ಸೌಮ್ಯ ಮತ್ತಿತರರು ಈ ವೇಳೆ ಹಾಜರಿದ್ದರು.

# ಸೋಂಕು ಹರಡದಂತೆ ನಿಗಾವಹಿಸಬೇಕು

## ಮಲೇಬೆನ್ನೂರು : ಕೋವಿಡ್ ಸಭೆಯಲ್ಲಿ ಉಪತಹಶೀಲ್ದಾರ್ ಆರ್. ರವಿ ಸೂಚನೆ



ಮಲೇಬೆನ್ನೂರು, ಜ.20- ಕೊರೊನಾ ಸೋಂಕು ಹರಡುತ್ತಿರುವುದು ನಿಜ. ಆದರೆ, ಈ ಬಾರಿ ಸೋಂಕಿನ ತೀವ್ರತೆ ಕಡಿಮೆ ಇರುವುದರಿಂದ ಜನರು ಆತಂಕಗೊಳ್ಳುವುದು ಬೇಡ ಎಂದು ಉಪತಹಶೀಲ್ದಾರ್ ಆರ್.ರವಿ ಹೇಳಿದರು.

ಇಲ್ಲಿನ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಕೊರೊನಾ ನಿಯಂತ್ರಣ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಬಿಎಲ್‌ಓ ಹಾಗೂ ಆಶಾ, ಅಂಗನವಾಡಿ ಕಾರ್ಯಕರ್ತರ ಜೊತೆ ಇಂದು ತುರ್ತು ಸಭೆ ನಡೆಸಿದರು.

ಶೀತ, ಕೆಮ್ಮು, ಜ್ವರ ಸೇರಿದಂತೆ ಇತ್ಯಾದಿ ರೋಗ ಲಕ್ಷಣಗಳು ಸತತವಾಗಿ ಕಂಡು ಬಂದರೆ ಕೂಡಲೇ ಕೋವಿಡ್ ಟೆಸ್ಟ್ ಮಾಡಿಸಿ. ಇದರಿಂದ ಸೋಂಕು ನಿಮ್ಮ ಮನೆಯ ಹಾಗೂ ನೆರೆಹೊರೆಯವರಿಗೆ ಹರಡುವುದನ್ನು ತಪ್ಪಿಸಬಹುದು. ಈ ನಿಟ್ಟಿನಲ್ಲಿ ಬಿಎಲ್‌ಓಗಳು, ಆಶಾ, ಅಂಗನವಾಡಿ ಕಾರ್ಯಕರ್ತರು ಸೋಂಕಿತರ ಪ್ರಥಮ ಹಾಗೂ ದ್ವಿತೀಯ ಸಂಪರ್ಕಿತರನ್ನು ತಕ್ಷಣ ಪತ್ತೆ ಮಾಡಿ, ಟೆಸ್ಟ್‌ಗೆ ಒಳಪಡಿಸುವ ಮೂಲಕ ಚೈನ್ ಲಿಂಕ್ ತಪ್ಪಿಸಬೇಕೆಂದು ರವಿ ಮನವಿ ಮಾಡಿದರು.

ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ ಮಾತನಾಡಿ, ಪಟ್ಟಣದಲ್ಲಿ ಸದ್ಯ 35 ಸಕ್ರಿಯ ಕೇಸ್‌ಗಳಿದ್ದು, ಇವರ ಜೊತೆ ಸಂಪರ್ಕ ಹೊಂದಿರುವವರನ್ನು ಪತ್ತೆ ಮಾಡಿ, ಟೆಸ್ಟ್ ಮಾಡಿಸುವ ಕೆಲಸ ನಡೆಯುತ್ತಿದ್ದು, ಸೋಂಕಿತರೆಲ್ಲರೂ ಹೋಂ ಐಸೋಲೇಷನ್‌ನಲ್ಲಿದ್ದಾರೆ. ಕೋವಿಡ್ 2ನೇ ಲಸಿಕೆ ಪಡೆದುಕೊಂಡು 9 ತಿಂಗಳಾಗಿದ್ದರೆ ಅಂತಹವರು ಬೂಸ್ಟರ್ ಡೋಸ್ ಪಡೆಯಲು ಅರ್ಹರಾಗಿರುತ್ತಾರೆ ಎಂದು ಸ್ಪಷ್ಟಪಡಿಸಿದರು.

ಪುರಸಭೆ ಮುಖ್ಯಾಧಿಕಾರಿ ರುಕ್ಮಿಣಿ ಮಾತನಾಡಿ, ಪಟ್ಟಣದಲ್ಲಿ ಸ್ವಚ್ಛತೆಗೆ ಒತ್ತು ನೀಡಿದ್ದು, ಪ್ರತಿ ವಾರ್ಡ್‌ನಲ್ಲೂ ಸ್ಯಾನಿಟೈಜ್ ಮಾಡಲು ಶೀಘ್ರ ಚಾಲನೆ ನೀಡಲಾಗುವುದೆಂದರು.

ಕಂದಾಯ ನಿರೀಕ್ಷಕ ಸಮೀರ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಪುರಸಭೆ ಅಧಿಕಾರಿಗಳಾದ ಪ್ರಭು, ಉಮೇಶ್, ಶಿವಯೋಗಿ, ಚಿತ್ರಪ್ಪ, ಬಿಎಲ್‌ಓಗಳಾದ ದಂಡಿ ತಿಪ್ಪೇಸ್ವಾಮಿ, ಗೋವಿಂದಪ್ಪ ಸಾವಜ್ಜಿ, ಕರಿಬಸಪ್ಪ, ಪೂಜಾರ್ ಹಾಲೇಶ್, ಹನುಮಗೌಡ, ಪ್ರೇಮ, ಲೀಲಾಬಾಯಿ ಮತ್ತಿತರರಿದ್ದರು.

## ತರಾಸು ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣ : ಪ್ರಬಂಧ ಆಹ್ವಾನ

ದಾವಣಗೆರೆ, ಜ.20 - ಕರ್ನಾಟಕ ಸಾಹಿತ್ಯ ಅಕಾಡೆಮಿಯು ಫೆಬ್ರವರಿ ಮಾಹೆಯಲ್ಲಿ 'ತ.ರಾ.ಸು. ಅವರ ಬದುಕು-ಬರಹ' ಎಂಬ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದ್ದು, ಇದಕ್ಕಾಗಿ ಆಸಕ್ತರಿಂದ ಪ್ರಬಂಧಗಳನ್ನು ಆಹ್ವಾನಿಸಿದೆ.

ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಪರ್ಯಾಯ ಗೋಷ್ಠಿಗಳು ಕೂಡ ನಡೆಯಲಿವೆ. ವಿಚಾರ ಸಂಕಿರಣದ ಪರ್ಯಾಯ ಗೋಷ್ಠಿಯಲ್ಲಿ ತ.ರಾ.ಸು. ಅವರ ಬದಕು-ಬರಹ ಕುರಿತಾಗಿ ಪ್ರಬಂಧ ಮಂಡಿಸುವವರು ಅರ್ಜಿಯೊಂದಿಗೆ ಪ್ರಬಂಧವನ್ನು ಇದೇ ದಿನಾಂಕ 29 ರೊಳಗೆ ಅಕಾಡೆಮಿಗೆ ರಿಜಿಸ್ಟರ್ ಅಂಚೆ ಅಥವಾ ಕೋರಿಯರ್ ಮೂಲಕ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ.

ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್ http://sahithyaacademy.karnataka.gov.in ಅನ್ನು ಸಂಪರ್ಕಿಸಬಹುದಾಗಿದೆ ಎಂದು ರಿಜಿಸ್ಟ್ರಾರ್ ಎನ್. ಕರಿಯಪ್ಪ ತಿಳಿಸಿದ್ದಾರೆ.

## ರಸ್ತೆ ಬದಿ ಚರಂಡಿ ನಿರ್ಮಿಸಲು ಆಗ್ರಹ

ದಾವಣಗೆರೆ, ಜ.20- ನಗರದ ಬಹುತೇಕ ಕಡೆಗಳಲ್ಲಿ ಅವೈಜ್ಞಾನಿಕ ರಸ್ತೆಗಳ ನಿರ್ಮಾಣವಾಗಿದ್ದು, ರಸ್ತೆಯ ಇಕ್ಕೆಲಗಳಲ್ಲಿ ಚರಂಡಿ ನಿರ್ಮಿಸದ ಕಾರಣ ಮಳೆ ಬಂದರೆ ಸಾಕು ನೀರೆಲ್ಲಾ ರಸ್ತೆ ಮೇಲೆ ಹರಿದು ರಸ್ತೆಗಳು ಹಾಳಾಗುತ್ತಿವೆ.

ಕೆಲವು ಕಡೆ ರಸ್ತೆ ಬದಿಗಳಲ್ಲಿ ಚರಂಡಿಗಳು ಸಹ ನಿರ್ಮಾಣವಾಗಿಲ್ಲ. ಕೂಡಲೇ ಮಹಾನಗರ ಪಾಲಿಕೆ ಅಧಿಕಾರಿಗಳು ನಗರದಲ್ಲಿ ಹಾಳಾಗಿರುವ ರಸ್ತೆಗಳ ದುರಸ್ತಿ ಜೊತೆಗೆ ರಸ್ತೆಯ ಎರಡೂ ಬದಿಗಳಲ್ಲಿ ಚರಂಡಿಗಳನ್ನು ನಿರ್ಮಿಸುವಂತೆ ನಾಗರೀಕರು ಆಗ್ರಹಿಸಿದ್ದಾರೆ.

## ಸಿದ್ಧಗಂಗಾ ಸ್ಕೌಟ್ ಗೈಡ್ಸ್‌ನಿಂದ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ



ದಾವಣಗೆರೆ, ಜ. 20- ನಗರದ ಶ್ರೀ ಸಿದ್ಧಗಂಗಾ ಸ್ಥಳೀಯ ಸಂಸ್ಥೆಯ ಸ್ಕೌಟ್ ಮತ್ತು ಗೈಡ್ಸ್ ಮಕ್ಕಳಿಂದ ಸ್ವಾಮಿ ವಿವೇಕಾನಂದರವರ 159ನೇ ವರ್ಷದ ಜನ್ಮ ದಿನವನ್ನು ವಿವೇಕಾನಂದರ ಭಾವ ಚಿತ್ರವನ್ನು ಬಿಡಿಸುವುದರ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಕಾರ್ಯಕಾರಿ ಸಮಿತಿ ಅಧ್ಯಕ್ಷರಾದ ಜಸ್ಟಿನ್ ಡಿಸೌಜ , ರೇಖಾರಾಣಿ, ಖಜಾಂಚಿ ಗಾಯತ್ರಿ ಚಿಮ್ಮಡ್ ಹಾಗೂ ಎಲ್ಲಾ ಸ್ಕೌಟ್ ಮಾಸ್ಟರ್ಸ್ ಹಾಗೂ ಗೈಡ್ ಕ್ಯಾಪ್ಟನ್ಸ್ ಭಾಗವಹಿಸಿದ್ದರು. ಜಂಟಿ-ಕಾರ್ಯದರ್ಶಿ ಶ್ರೀನಿವಾಸ್‌ರ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

## ಸ್ವಾಮಿ ವಿವೇಕಾನಂದರ ಜಯಂತಿ

ದಾವಣಗೆರೆ, ಜ.20- ನಗರದ ಸ್ವಾಮಿ ವಿವೇಕಾನಂದ ಬಡಾವಣೆಯ ನಾಗರಿಕರ ಹಿತರಕ್ಷಣಾ ಸಮಿತಿ ವತಿಯಿಂದ ಕೋವಿಡ್ ನಿಯಮ ಪಾಲಿಸುವ ಮೂಲಕ ವಿವೇಕಾನಂದರ ಜಯಂತಿಯನ್ನು ಸರಳ ರೀತಿಯಲ್ಲಿ ಆಚರಿಸಲಾಯಿತು. ಸಮಿತಿ ಅಧ್ಯಕ್ಷ ಉಮೇಶ್ ಎನ್. ಪಾಟೀಲ್, ಪ್ರಧಾನ ಕಾರ್ಯದರ್ಶಿ ಕೆ.ಸಿ. ಚನ್ನಪ್ಪ, ಖಜಾಂಚಿ ಬಸವರಾಜಪ್ಪ, ಇತರೆ ಪದಾಧಿಕಾರಿಗಳಾದ ವೀರಭದ್ರಪ್ಪ, ಶಿವಯ್ಯ, ಲೀಲಾವತಿ, ಅರುಣ್ ಹುನಗುಂದ, ವೇಣುಗೋಪಾಲ್, ಮಹೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಮಲೇಬೆನ್ನೂರು ಇಂಡಿಯಾ ಪಬ್ಲಿಕ್ ಶಾಲೆಯಲ್ಲಿ 'ಫ್ರೂಟ್ ಡೇ'



ದಾವಣಗೆರೆ, ಜ. 20- ಮಲೇಬೆನ್ನೂರಿನ ಜಿಗಳಿ ರಸ್ತೆಯಲ್ಲಿರುವ ಯೆಸ್ ಇಂಡಿಯಾ ಪಬ್ಲಿಕ್ ಶಾಲೆಯಲ್ಲಿ ಮೊನ್ನೆ 'ಹಣ್ಣುಗಳ ದಿನಾಚರಣೆ' ('ಫ್ರೂಟ್ ಡೇ') ಹಮ್ಮಿಕೊಳ್ಳಲಾಗಿತ್ತು. ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ತರಗತಿಯ ವಿದ್ಯಾರ್ಥಿಗಳಿಗೆ ವಿವಿಧ ಬಗೆಯ ಹಣ್ಣುಗಳ ಪರಿಚಯ, ಸೇವನೆಯ ಪ್ರಯೋಜನ ತಿಳಿಸಲಾಯಿತು.

ಮುಖ್ಯೋಪಾಧ್ಯಾಯ ಜನಾಬ್ ಮುನ್ಸರ್ ಹಮೀದ್ ಹಣ್ಣುಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಶಿಕ್ಷಕರಾದ ಸಲ್ಮಾನುಲ್ ಫಾರಿಸ್ ಬುಖಾರಿ, ಸಲ್ಮಾಬಾನು, ಸೈಯದಾ ಖುರ್ರತ್ ಉಲ್ಲೈನ್, ಸಬ್ರೀನ್ ತಾಜ್, ಮಮತ ಎಸ್.ಟಿ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ನೃತ್ಯದ ಮೂಲಕ ವಿವಿಧ ಬಗೆಯ ಹಣ್ಣುಗಳ ಪರಿಚಯ ಮಾಡಿಕೊಟ್ಟರು.

## ಹರಿಹರ : ಚಂಪಾ ಅವರಿಗೆ ನಮನ



ಹರಿಹರ, ಜ.20- ಚಿಂತನ ಪ್ರತಿಷ್ಠಾನ ಕಚೇರಿಯಲ್ಲಿ ಹರಿಹರ ತಾಲ್ಲೂಕಿನ ಸಾಹಿತ್ಯ ಆಸಕ್ತರು ಸೇರಿ ಅಗಲಿದ ಹಿರಿಯ ಸಾಹಿತಿ ಹಾಗೂ ಸಾಹಿತ್ಯ ಲೋಕದಲ್ಲಿ ಚಂಪಾ ಎಂದೇ ಹೆಸರಾದ ಕವಿ, ಕನ್ನಡ ಪರ ಹೋರಾಟಗಾರ, ನಾಟಕಕಾರ, ಪತ್ರಕರ್ತರೂ ಆಗಿದ್ದ ಪ್ರೊ|| ಚಂದ್ರಶೇಖರ್ ಪಾಟೀಲ್ ಇವರ ಆತ್ಮಕ್ಕೆ ಶಾಂತಿ ಕೋರಿ ನುಡಿನಮನದ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕಾರ್ಮಿಕ ಮುಖಂಡರಾದ ಹೆಚ್.ಕೆ.ಕೊಟ್ರಪ್ಪ, ಹೆಚ್. ನಿಜಗುಣ, ಎಕ್ಕೆಗೊಂದಿ ರುದ್ರೇಗೌಡ, ಪತ್ರಕರ್ತರಾದ ಶೇಖರಗೌಡ ಪಾಟೀಲ್, ಜಿಗಳಿ ಪ್ರಕಾಶ್, ಮಲೇಬೆನ್ನೂರಿನ ಕೃಷಿಕರಾದ ಕರಿಗೌಡ್ರ ರಂಗನಾಥ್, ಚಿಂತನ ಪ್ರತಿಷ್ಠಾನದ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ್, ಕಾರ್ಯದರ್ಶಿ ಡಿ.ಫ್ರಾನ್ಸಿಸ್, ವಕೀಲ ಸುರೇಶ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಚಂಪಾ ನಿಧನಕ್ಕೆ ಒಕ್ಕೂಟದ ಸಂತಾಪ

ದಾವಣಗೆರೆ, ಜ.20- ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಚಂದ್ರಶೇಖರ ಪಾಟೀಲ್ ನಿಧನಕ್ಕೆ ಕನ್ನಡಪರ ಸಂಘಟನೆಗಳ ಒಕ್ಕೂಟ ಕಂಬನಿ ಮಿಡಿದಿದೆ.ಚಂಪಾ ಅವರು ಕನ್ನಡ ಸಾರಸ್ವತ ಲೋಕದ ಅಪ್ರತಿಮ ದಿಗ್ಗಜರಾಗಿದ್ದು, ಅವರ ಅಗಲಿಕೆ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ಟಿ. ಶಿವಕುಮಾರ್ ಮತ್ತು ಕಾರ್ಯಾಧ್ಯಕ್ಷ ಕೆ.ಜಿ. ಶಿವಕುಮಾರ್ ಸಂತಾಪ ವ್ಯಕ್ತಪಡಿಸಿದ್ದಾರೆ.

## ಡಿ'ಸೌಜರಿಗೆ ಸ್ಕೌಟ್ ಗೈಡ್ಸ್ ಸನ್ಮಾನ



ದಾವಣಗೆರೆ, ಜ.20- ವರ್ಷದ ವ್ಯಕ್ತಿ ಪ್ರಶಸ್ತಿ ಪುರಸ್ಕೃತ ಸಿದ್ಧಗಂಗಾ ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿ'ಸೌಜರವರಿಗೆ ಸಿದ್ಧಗಂಗಾ ಸ್ಥಳೀಯ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಸಂಸ್ಥೆಯ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ ಮತ್ತು ಗೈಡ್ ಶಿಕ್ಷಕರು ಉಪಸ್ಥಿತರಿದ್ದರು. ಜಿಲ್ಲಾ ಸಂಸ್ಥೆಯಿಂದ ಕಾರ್ಯದರ್ಶಿ ರತ್ನ ಎಂ. ಮತ್ತು ಅಶ್ವಿನಿ ಆಗಮಿಸಿದ್ದರು.

ಇದೇ ಸಂದರ್ಭದಲ್ಲಿ ಕಾರ್ಯಕಾರಿಣಿ ಸಭೆ ನಡೆಸಿ, ಲೆಕ್ಕ-ಪತ್ರಗಳನ್ನು ಖಜಾಂಚಿ ಗಾಯತ್ರಿ ಚಿಮ್ಮಡ್ ಮಂಡಿಸಿದರು. ವಾರ್ಷಿಕ ವರದಿಯನ್ನು ಶ್ರೀನಿವಾಸ್ ಓದಿದರು. ಕಾರ್ಯ ಚಟುವಟಿಕೆಗಳನ್ನು ನಿರ್ಮಲ ಮಂಡಿಸಿದರು. ಕಾರ್ಯದರ್ಶಿ ಶಶಿಕಲಾ ಮತ್ತು ಉಪ ಆಯುಕ್ತರಾದ ರೇಖಾರಾಣಿ ಹಾಜರಿದ್ದು ಕಲಾಪ ನಡೆಸಿಕೊಟ್ಟರು.

# ಖಿನ್ನತೆಯ ಮನಸ್ಸುಗಳನ್ನು ಅರಳಿಸುವ ಶಕ್ತಿ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಗಿದೆ

**ಕಲಾಕುಂಚ ವಿದ್ಯಾನಗರ ಶಾಖೆ ಉದ್ಘಾಟನಾ ಸಮಾರಂಭದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ**



ದಾವಣಗೆರೆ, ಜ. 20 - ಭಾರತೀಯ ಸಂಸ್ಕೃತಿ, ಸಂಸ್ಕಾರ, ಕನ್ನಡ ನಾಡು-ನುಡಿಯ ಇತಿಹಾಸ ಪರಂಪರೆಗಳನ್ನು ವೈಭವೀಕರಿಸುವ ಆದ್ಯ ಕರ್ತವ್ಯ. ಸಾಂಸ್ಕೃತಿಕ ಚಟುವಟಿಕೆಗಳನ್ನು ಉಳಿಸಿ, ಬೆಳೆಸುವುದರಿಂದ ಮಾನವನ ಜೀವನಕ್ಕೆ ಪೂರ್ಣ ಪ್ರಮಾಣದ ಸಾರ್ಥಕತೆ ಬರುತ್ತದೆ ಎಂದು ಪಾಲಿಕೆ ಮೇಯರ್ ಎಸ್.ಟಿ.ವೀರೇಶ್ ಅಭಿಪ್ರಾಯಪಟ್ಟರು.

ಇಲ್ಲಿನ ವಿದ್ಯಾನಗರದ ಶ್ರೀ ಮಾಗನೂರು ಬಸಪ್ಪ ರೋಟರಿ ಕ್ಲಬ್ ಸಭಾಂಗಣದಲ್ಲಿ ಕಲಾಕುಂಚ ವಿದ್ಯಾನಗರ ಶಾಖೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿದ್ದ ಕ.ಸಾ.ಪ. ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಮಾತನಾಡಿ, ಖಿನ್ನತೆಯ ಮನಸ್ಸುಗಳನ್ನು ಅರಳಿಸುವ, ಪುಳಕಿತಗೊಳಿಸುವ ಶಕ್ತಿ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಗೆ ಇದೆ ಎಂದರು.

ಕಲಾಕುಂಚ ವಿದ್ಯಾನಗರ ಶಾಖೆಯ ನೂತನ ಅಧ್ಯಕ್ಷರಾಗಿ ಪದಗ್ರಹಣ ಸ್ವೀಕರಿಸಿದ ಬಿ.ದಿಳ್ಯಪ್ಪ ಮಾತನಾಡಿ, ಯಾವುದೇ ಕೆಲಸವನ್ನು ಕಾಯಕ ಪ್ರಜ್ಞೆಯಿಂದ, ಬದ್ಧತೆಯಿಂದ ನಿಷ್ಠೆಯಿಂದ ಕೈಗೊಂಡಾಗ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದರು.

ಸಂಸ್ಥೆಯ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್‌ಶೆಣೈ ಅಧ್ಯಕ್ಷತೆ ವಹಿಸಿದ್ದರು.

ಪಾಲಿಕೆ ಸದಸ್ಯರುಗಳಾದ ಗೀತಾ ಬಿ. ದಿಳ್ಯಪ್ಪ, ವೀಣಾ ನಂಜಪ್ಪ, ಗೌರಮ್ಮ ಗಿರೀಶ್, ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕಿ ಜ್ಯೋತಿ ಗಣೇಶ್ ಶೆಣೈ, ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ಮಾತನಾಡಿದರು.

ಕಲಾಕುಂಚ ವಿವಿಧ ಶಾಖೆಗಳ ಅಧ್ಯಕ್ಷರುಗಳಾದ ಶಾರದಮ್ಮ ಶಿವನಪ್ಪ, ಸುಜಾತ ಬಸವರಾಜ್, ಕುಸುಮಾ ಲೋಕೇಶ್, ಚನ್ನಬಸವ ಶೀಲವಂತ್, ಡಿ.ಹೆಚ್. ಚನ್ನಬಸಪ್ಪ, ವಿಶ್ವನಾಥ್, ಗಿರಿಜಮ್ಮ ನಾಗರಾಜಪ್ಪ, ಮಂಗಳಗೌರಿ ಉಪಸ್ಥಿತರಿದ್ದರು.

ಶಾಖೆಯ ಪ್ರಧಾನ ಕಾರ್ಯದರ್ಶಿ ಮುರಿಗಯ್ಯ ಕುರ್ಕಿ ಸ್ವಾಗತಿಸಿದರು. ಚಂದ್ರಶೇಖರ ಅಡಿಗ ಕಾರ್ಯಕ್ರಮ ನಿರೂಪಿಸಿದರು.

## ಎಂಎಸ್‌ಬಿ ಕಾಲೇಜಿನಲ್ಲಿಂದು ಉಪನ್ಯಾಸ

ದಾವಣಗೆರೆಯ ಎಂ.ಎಸ್.ಬಿ. ಆರ್ಟ್ಸ್ ಅಂಡ್ ಕಾಮರ್ಸ್ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಆ್ಯಂಟಿ-ರ್‍ಯಾಗಿಂಗ್ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯುವುದು. ಸಂಪನ್ಮೂಲ ವ್ಯಕ್ತಿಯಾಗಿ ಡಾ. ಜಿ.ಎಸ್. ಯತೀಶ್ ಆಗಮಿಸುವರು. ಅಧ್ಯಕ್ಷತೆಯನ್ನು ಪ್ರೊ. ಬಸಪ್ಪ ಎ.ಡಿ. ವಹಿಸುವರು. ಕಾರ್ಯಕ್ರಮದಲ್ಲಿ ಪ್ರೊ. ಕೆ.ಎಸ್.ಎನ್. ರಾವ್ ಉಪಸ್ಥಿತರಿರುವರು.


**ಜಮೀನು ಮಾರಾಟಕ್ಕೆ (50 ಎಕರೆ)**
ಐವತ್ತು ಎಕರೆ (50) ಜಮೀನು ಹರಪನಹಳ್ಳಿ ತಾ. ಜಂಗಂ ತುಂಬಿಗೆರೆಯಲ್ಲಿ ಉಚ್ಚಂಗಿದುರ್ಗದ ಹತ್ತಿರ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
(ದಾವಣಗೆರೆಯಿಂದ 30 ಕಿ.ಮೀ., ಮೇನ್ ರೋಡ್‌ಗೆ ಇದೆ)

**WANTED TEACHER**
Social Teacher to work for English Medium School at Modren School, Davanagere.
Qualification : B.A. B.Ed (Social Science) or M.A.
Note: must be fluency in English
73382 24444

**ಲೀಸ್‌ಗೆ ಮನೆ ಬೇಕಾಗಿದೆ**
ಇಂಡಿಪೆಂಡೆಂಟ್ ಮನೆ ಲೀಸ್‌ಗೆ ಬೇಕಾಗಿದೆ. ಆಂಜನೇಯ ಲೇ ಔಟ್, ಎಸ್.ಎನ್. ಲೇ ಔಟ್, ಎಸ್.ಎಸ್. ಲೇ ಔಟ್, ಎ ಬ್ಲಾಕ್ ಅಥವಾ ಬಿ ಬ್ಲಾಕ್, ರಿಂಗ್ ರೋಡ್, ಕ್ಲಾಕ್ ಟವರ್ ಸರ್ಕಲ್,
91132 16279, 90082 27199

**ಮನೆ ಮಾರಾಟಕ್ಕಿದೆ**
ನಗರದ ಕೆ.ಬಿ. ಬಡಾವಣೆಯಲ್ಲಿ ಬಿಜೆಪಿ ಕಚೇರಿ ಹತ್ತಿರ 40x44 ಅಳತೆಯ ನೀರಿನ ಸೌಕರ್ಯವುಳ್ಳ ಮನೆ ಮಾರಾಟಕ್ಕಿದೆ. ಆಸಕ್ತರು ವಿಚಾರಿಸಿ.
94487 89513
98445 72340
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**SITE FOR SALE**
J.H. Patel Badavane A Block DUDA Approved Site No 428 measuring 60x40 East Facing Site
Intrested People Contact :
96208 81115

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಹೊಲ ಬಾಡಿಗೆಗೆ/ಲೀಸ್‌ಗೆ ಇದೆ**
5 ಎಕರೆ, 20 ಗುಂಟೆ ಹೊಲ ಬಾಡಿಗೆಗೆ ಇದೆ. ಜರಿಕಟ್ಟೆ, ದಾವಣಗೆರೆ ಜಿಲ್ಲೆ. ಹೋಟೆಲ್ ಹಾಗೂ ಶಾಲೆಗಳಿಗೆ ಬಾಡಿಗೆಗೆ ದೊರೆಯುತ್ತದೆ. ದೇವರಬೆಳಕೆರೆ ಮುಖ್ಯರಸ್ತೆ, ದಾವಣಗೆರೆಯಿಂದ. 8 ಕಿ.ಮೀ. ದೂರ
ಫೋ. : 99648 66666

**ಮನೆ ಲೀಜ್‌ಗೆ ಲಭ್ಯವಿವೆ**
(ಸಸ್ಯಹಾರಿಗಳಿಗೆ ಮಾತ್ರ)
ನೆಲ ಮಹಡಿ - 2 ಬೆಡ್ ರೂಂ
1ನೇ ಮಹಡಿ - 3 ಬೆಡ್ ರೂಂ
2ನೇ ಮಹಡಿ - ರೂಮ್
ಡಿಸಿಎಂ ಲೇಔಟ್, ದಾವಣಗೆರೆ.
99024 12406, 94822 01267

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್. ಲೇಔಟ್ 'ಎ' ಬ್ಲಾಕ್ 40x60, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ 40x60, 40x60 ಉತ್ತರ, ಎಂಸಿಸಿ 'ಬಿ' ಬ್ಲಾಕ್ 40x60, 40x60 ಪೂರ್ವ
ರಿಯಲ್ ಎಸ್ಟೇಟ್ ಏಜೆಂಟ್
ಪ್ರಶಾಂತ್: 99643 16777

**ಪ್ರೀ ವೆಡ್ಡಿಂಗ್ ಡ್ರೆಸ್ ಬಾಡಿಗೆಗೆ ದೊರೆಯುತ್ತದೆ ಹಾಗೂ ಫೋಟೋ ಶೂಟ್ ಮಾಡಿಕೊಡಲಾಗುವುದು**
Pre-Wedding photo shoot and dress on Rent
ಮನು ಸ್ಟುಡಿಯೋ
2ನೇ ಮೇನ್ 7ನೇ ಕ್ರಾಸ್ ವಿನೋಬನಗರ ದಾವಣಗೆರೆ.
94483-39151

**ಮನೆ ಬಾಡಿಗೆಗೆ ಇದೆ**
2 ಬೆಡ್‌ರೂಂ, 2 ಬಾತ್‌ರೂಂ, ಲಿಫ್ಟ್ ಇರುವ 2 ಮನೆಗಳು ಮಹಾಲಕ್ಷ್ಮಿ ಲೇಔಟ್‌ನ ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ ಬಾಡಿಗೆಗೆ ಇವೆ. ಸಂಪರ್ಕಿಸಿ:
96388 17967
73380 43912

**REQUIRED**
Telecalling only for female (freshers/Experienced), Reception also, Marketing executive for Institution
Minimum 1year experience
Location:- Davangere. Contact
9606692888, 8296376716

**ಮಾರಾಟಕ್ಕಿವೆ**
ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿವೆ ದಾವಣಗೆರೆಯಲ್ಲಿ (ದೊಡ್ಡ ಬಾತಿ)
ಸಂಪರ್ಕಿಸಿ :
88920 08800

**ಬೇಕಾಗಿದ್ದಾರೆ**
Call Center - Girls
Accountant - Girls
Field Executive - Boys
Sri Kuruvatti Basaveshwara Pharma
College Road, P.J. Extn., Davangere.
95139 15520

**ಸೈಟು ಬೇಕಾಗಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x40 ಅಥವಾ 30x50 ಪೂರ್ವ ಮತ್ತು ಉತ್ತರಕ್ಕೆ ಇರುವ ಸೈಟ್ ಖರೀದಿಗೆ ಬೇಕಾಗಿದೆ. ಪೂರಾ ಡಿ.ಡಿ. ಮುಖಾಂತರ 15 ದಿನಗಳಲ್ಲಿ ರಿಜಿಸ್ಟರ್ ಮಾಡಿಕೊಳ್ಳಲಾಗುವುದು.
ಸಂಪರ್ಕಿಸಿ : 80503 98121

**ಮನೆ ಬಾಡಿಗೆಗಿದೆ**
ಪೂರ್ವ ದಿಕ್ಕು ನೆಲಮಹಡಿ ಮುನ್ಸಿಪಲ್ ವಾಟರ್, ಬೋರ್‌ವೆಲ್ ಸೌಲಭ್ಯವಿರುವ ಎರಡು ಬೆಡ್ ರೂಂ ಮನೆ ಬಾಡಿಗೆಗಿದೆ. ಸ್ಥಳ : ಚೈನ್ ಟೆಂಪಲ್ ರಸ್ತೆ, ಕಿರುವಾಡಿ ಲೇಔಟ್, ಕೆ.ಬಿ. ಬಡಾವಣೆ, ದಾವಣಗೆರೆ.
ಮೊ : 98445 85017
ಸಸ್ಯಹಾರಿಗಳಿಗೆ ಮಾತ್ರ.

**ಬೇಕಾಗಿದ್ದಾರೆ**
ಟಾರ್ಪಾಲಿನ್ ಕಂಪನಿಯಲ್ಲಿ ಮಷೀನ್ ಆಪರೇಟರ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿರಿ.
99452 03386

**20x40 ಕೆಳಗೆ+ಮೇಲೆ ಮನೆ ಲೀಸ್‌ಗೆ ಇದೆ**
ನಲ್ಲಿ ಮತ್ತು ಬೋರ್ ನೀರಿನ ಸೌಕರ್ಯವಿದೆ. KSRTC ಬಸ್‌ಸ್ಟ್ಯಾಂಡ್ ಹಿಂಭಾಗ, ಭಗತ್‌ಸಿಂಗ್ ನಗರ, ದಾವಣಗೆರೆ
(M) : 97439 68557
(M) : 98866 63948

**ಮಾರಾಟಕ್ಕಿದೆ**
ಸಿಮೆಂಟ್ ಬ್ರಿಕ್ಸ್ ಫ್ಯಾಕ್ಟರಿ ಮಾರಾಟಕ್ಕಿದೆ. ಸರ್ವೆ ನಂಬರ್ 134/3 ಒಂದು ಎಕರೆ ಎನ್.ಎ. ಆಗಿದೆ 27 ಗುಂಟೆ ಹೊಲ ಮಾರಾಟಕ್ಕಿದೆ -ಐಗೂರು, ದಾವಣಗೆರೆ ಜಿಲ್ಲೆ
90365 59096, 92428 37951

**TEACHERS WANTED**
We look for trained and untrained teachers with fluency in English for the following subject. English, Maths, Science, Social, Hindi, Kannada, Computer Science
Sri Gurukula CBSE Residential School
Lokikere Road, Thuruchagatta Village, Davangere.
7338604512, 73386 04513

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
2nd Floor, ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. ವಿಚಾರಿಸಿ :
ವಿಳಾಸ : ಹೈಟೆಕ್ ಹಾಸ್ಪಿಟಲ್ ಎದುರು, ಧರ್ಮಸ್ಥಳ ಬಿಲ್ಡಿಂಗ್ ಪಕ್ಕ.
94497 72655
63616 04261

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**PHOTOSHOP & CORELDRAW**
C,C++, JAVA, PYTHON, SCHOOL PROJECTS
ISO & AICTE APPROVED
Ph : 89712 79127

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ ಕಂಪ್ಯೂಟರ್ ಜ್ಞಾನ ಹೊಂದಿರುವವರಿಗೆ ಮೊದಲ ಆದ್ಯತೆ
63635 29004
97428 06222

**ಬೇಕಾಗಿದ್ದಾರೆ**
ಯುವಕ/ ಯುವತಿಯರು ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Fresher also can Apply
84310 22744

**ಬೇಕಾಗಿದ್ದಾರೆ**
ಮರುತ್ ಎಂಟರ್‌ಪ್ರೈಸಸ್‌ನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು.
ಕೂಡಲೇ ಸಂಪರ್ಕಿಸಿ :
ಮರುತ್ ಎಂಟರ್‌ಪ್ರೈಸಸ್
ಬಾಪೂಜಿ ಬ್ಯಾಂಕ್, ಎದುರು, ಹದಡಿ ರಸ್ತೆ, ದಾವಣಗೆರೆ. 98868 96574

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಶ್ರೀ ಹುಲಿಗೆಮ್ಮ ದೇವಿ ಶಕ್ತಿ**
ಜ್ಯೋತಿಷ್ಯ, ವಾಸ್ತು, ಹಸ್ತ ಶಾಸ್ತ್ರ, ಗುಪ್ತ ಸಮಸ್ಯೆ ಯಾವುದೇ ಇರಲಿ, ಗಂಡ - ಹೆಂಡತಿ ಕಿರಿಕಿರಿಗೆ ವಶೀಕರಣ ಪರಿಹಾರ, ಕುಡಿತದ ಚಟ ಬಿಡಿಸಲಾಗುವುದು.
97408 15926

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
98444 92888

**ಯಂತ್ರ ಸಂಜೀವಿನಿ**
ಸ್ತ್ರೀಯರಿಗೆ ದೇವಿ ಶಕ್ತಿಯಿಂದ ದೀಕ್ಷೆ ಕೊಡಲಾಗುವುದು, ದೈವ ಹೇಳಿಕೆ ಹೇಳಲು ಬಯಸುವ ಮಹಿಳೆಯರಿಗೆ ತರಬೇತಿ ಹಾಗು ಶಕ್ತಿ ದೀಕ್ಷೆ ಕೊಡಲಾಗುವುದು. ಆಸಕ್ತರು ಸಂಪರ್ಕಿಸಿ
97409 55345

**WANTED**
Need Telecaller For Banking Products. Intersted Candidates Please Contact us
(Female candidate only)
73534 80873
88676 37350

**ಬೇಕಾಗಿದ್ದಾರೆ**
ಅಕೌಂಟೆಂಟ್ (1)
ಸೇಲ್ಸ್ ಮ್ಯಾನ್ (2)
ವಿದ್ಯಾರ್ಹತೆ : 2nd PUC
ಅನುಭವವುಳ್ಳವರಿಗೆ ಮೊದಲ ಆದ್ಯತೆ
ಸಂಪರ್ಕಿಸಿ :
ಪೂಜಾ ಹಾರ್ಡ್‌ವೇರ್
ಅರುಣ ಟಾಕೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ.

# ಪ್ರವೃತ್ತಿಯನ್ನಾಗಿಸಿಕೊಂಡಿದ್ದ ಬರಹ ಭವಿಷ್ಯ ರೂಪಿಸಿ, ಸಾಹಿತಿಯನ್ನಾಗಿಸಿದೆ

ದಾವಣಗೆರೆ, ಜ.20-ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್ ಆಗಿರುವ ಹೆಚ್.ವಿ.ಮಂಜುನಾಥ ಸ್ವಾಮಿ ಅವರು ತಮ್ಮ ಬದುಕಿನ ಅಂತರಾಳದ ಭಾವನೆಗಳನ್ನು ಹಂಚಿಕೊಳ್ಳುವ ಸದುದ್ಧೇಶದಿಂದ ಹವ್ಯಾಸಿ ಬರಹಗಾರರನ್ನಾಗಿಸಿಕೊಳ್ಳುವುದರ ಮೂಲಕ ರಚಿಸಿದ ಹಲವಾರು ಲೇಖನ - ಕವಿತೆಗಳ ಸಂಗ್ರಹ 'ಬದುಕು - ಬಯಕೆ - ಭಾವನೆ' ಕೃತಿ ಸಾಹಿತ್ಯ ಲೋಕಕ್ಕೆ ಸಮರ್ಪಿತಗೊಂಡಿದೆ.



ದಾವಣಗೆರೆ ಲಯನ್ಸ್ ಕ್ಲಬ್ ಸಹಯೋಗದೊಂದಿಗೆ ಲಯನ್ಸ್ ಭವನದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಸರಳ ಸಮಾರಂಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರು ಈ ಪುಸ್ತಕವನ್ನು ಬಿಡುಗಡೆ ಮಾಡುವುದರೊಂದಿಗೆ ಸಾಹಿತ್ಯ ಕ್ಷೇತ್ರಕ್ಕೆ ಪರಿಚಯಿಸಿದರು.

ಈ ಸಂದರ್ಭದಲ್ಲಿ ಆಶಯ ನುಡಿಗಳನ್ನಾಡಿದ ವಾಮದೇವಪ್ಪ, 'ಬದುಕು - ಬಯಕೆ - ಭಾವನೆ' ಕೃತಿಯು ಸ್ಫೂರ್ತಿದಾಯಕ ಮತ್ತು ಜೀವನೋತ್ಸಾಹ ಮೂಡಿಸುವಂತಹದ್ದಾಗಿದ್ದು, ವೈವಿಧ್ಯಮ ಭಾವನೆಗಳನ್ನು ಶಕ್ತಿ ವರ್ಧಕ ಟಾನಿಕ್ ರೂಪದಲ್ಲಿ ಮಂಜುನಾಥ ಸ್ವಾಮಿ ನೀಡಿದ್ದಾರೆ ಎಂದು ಮುಕ್ತ ಕಂಠದಿಂದ ಶ್ಲಾಘಿಸಿದರು.

ಸಮಾರಂಭದ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದ ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ, ವೃತ್ತಿಯಲ್ಲಿ ಇಂಜಿನಿಯರ್ ಆಗಿರುವ ಮಂಜುನಾಥ ಸ್ವಾಮಿ ಅವರು ಮನೆಗಳನ್ನು ಕಟ್ಟುವುದರ ಜೊತೆಗೆ, ಪ್ರವೃತ್ತಿಯನ್ನಾಗಿಸಿಕೊಂಡ ಬರವಣಿಗೆಯಲ್ಲಿ ಸದ್ವಿಚಾರಗಳ ಮೂಲಕ ಮನಸ್ಸು ಕಟ್ಟುವ ಕಾಯಕ ಮಾಡುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಜೀವನದಲ್ಲಿ ಸಮಸ್ಯೆಗಳು ಸರ್ವೇ ಸಾಮಾನ್ಯ. ಅವನ್ನು ಧೈರ್ಯ ಕಳೆದುಕೊಳ್ಳದೇ ಸಮರ್ಥವಾಗಿ ಎದುರಿಸಬೇಕು ಎನ್ನುವಂತಹ ಹಲವಾರು ಲೇಖನ - ಕವಿತೆಗಳ ಮೂಲಕ ಮಂಜುನಾಥ ಸ್ವಾಮಿ ಅವರು ಈ ಪುಸ್ತಕದಲ್ಲಿ ಜೀವನೋತ್ಸಾಹ ತುಂಬಿದ್ದಾರೆ ಎಂದು ಶ್ರೀಗಳು ತಿಳಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಹಿರಿಯ ಸಿವಿಲ್ ಇಂಜಿನಿಯರ್ ಹಾಗೂ ಕಲಾವಿದ ಆರ್.ಟಿ. ಅರುಣ್ ಕುಮಾರ್ ಮಾತನಾಡಿ, ಪುಸ್ತಕದಲ್ಲಿನ ಲೇಖನಗಳು - ಕವಿತೆಗಳು ಪಾಂಡಿತ್ಯದ ಬರಹಗಳಲ್ಲ ; ಅನುಭವದಿಂದ ಕೂಡಿರುವ ಬರಹಗಳು. ಮಂಜಣ್ಣ ವ್ಯಕ್ತಪಡಿಸಿರುವ ವಿಷಯಗಳಲ್ಲಿ ಗಟ್ಟಿತನವಿದೆ ; ಯುವಜನರ ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ಸ್ಫೂರ್ತಿದಾಯಕ ವಿಷಯಗಳು 'ಬದುಕು - ಬಯಕೆ - ಭಾವನೆ' ಪುಸ್ತಕದಲ್ಲಿ ಅಡಗಿವೆ ಎಂದು ಮಾರ್ಮಿಕವಾಗಿ ವಿಶ್ಲೇಷಿಸಿದರು.

ಮತ್ತೋರ್ವ ಅತಿಥಿಯಾಗಿದ್ದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ಸಹ ಕಾರ್ಯದರ್ಶಿ ಎಂ.ಕೆ. ಬಕ್ಕಪ್ಪ ಮಾತನಾಡಿ, ಜೀವನದಲ್ಲಿ ಮನಃಶ್ಯಾಂತಿ ಮತ್ತು ನೆಮ್ಮದಿ ಹುಡುಕುವವರಿಗೆ ಈ ಪುಸ್ತಕ ಮಾರ್ಗದರ್ಶನ ನೀಡಬಲ್ಲದು ಎಂದು ಅಭಿಪ್ರಾಯಪಟ್ಟರು.

ಇನ್ನೋರ್ವ ಅತಿಥಿಯಾಗಿದ್ದ ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ. ಜಯಕುಮಾರ್ ಮಾತನಾಡಿ, ಕಷ್ಟ ಪಟ್ಟು ಬದುಕನ್ನು ಕಟ್ಟಿಕೊಂಡಿರುವ ಮಂಜುನಾಥ ಸ್ವಾಮಿ ಅವರು ತಮ್ಮ ಜೀವನದಲ್ಲಿ ಕಲಿತ ನೋವು - ನಲಿವುಗಳ ಪಾಠವನ್ನು ಬರವಣಿಗೆಯ ಮೂಲಕ ವ್ಯಕ್ತಪಡಿಸಿ ಯುವ ಸಮೂಹಕ್ಕೆ ಸಲಹೆ - ಸೂಚನೆ ನೀಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

**ಹೆಚ್.ವಿ. ಮಂಜುನಾಥ ಸ್ವಾಮಿ ಅವರ ಚೊಚ್ಚಲ ಕೃತಿ 'ಬದುಕು - ಬಯಕೆ - ಭಾವನೆ' ಪುಸ್ತಕ ಸಾಹಿತ್ಯ ಲೋಕಕ್ಕೆ ಸಮರ್ಪಣೆ**

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಲಯನ್ಸ್ ವಿಶ್ರಾಂತ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್, ಜನತಾವಾಣಿ ಉಪ ಸಂಪಾದಕ ಇ.ಎಂ. ಮಂಜುನಾಥ, ವೀರಶೈವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಲಯನ್ಸ್ ಟ್ರಸ್ಟ್ ಖಜಾಂಚಿ ಎನ್.ವಿ. ಬಂಡಿವಾಡ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ಈ ಪುಸ್ತಕ ಆಸಕ್ತರ ಕೈ ಸೇರಲಿ, ಓದುಗರಲ್ಲಿ ಜೀವನೋತ್ಸಾಹ ಬೀರಲಿ, ಮುದುಡಿದ ಮನಸ್ಸುಗಳು ಅರಳುವಂತೆ ಮಾಡಲಿ ಎಂದು ಆಶಯ ವ್ಯಕ್ತಪಡಿಸಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಕೃತಿಕಾರ ಹೆಚ್.ವಿ. ಮಂಜುನಾಥ ಸ್ವಾಮಿ, ಲೇಖನ ಮತ್ತು ಕವಿತೆ ಬರೆಯುವುದನ್ನು ರೂಢಿಸಿಕೊಂಡ ಬಗೆಯನ್ನು ಸ್ವಾರಸ್ಯಕರವಾಗಿ ಮೆಲುಕು ಹಾಕಿದರು. ಮಂಜುನಾಥ ಸ್ವಾಮಿ ಅವರ ಧರ್ಮಪತ್ನಿ ಶ್ರೀಮತಿ ಜ್ಯೋತಿ ಅವರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಶಿಕ್ಷಕ ಸಿ.ಅಜಯ್ ಕುಮಾರ್ ಪ್ರಾರ್ಥನೆಯ ನಂತರ ಲಯನ್ಸ್ ಕ್ಲಬ್ ಕಾರ್ಯದರ್ಶಿ ಕೋರಿ ಶಿವಕುಮಾರ್, ಸಹ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್ ಸ್ವಾಗತಿಸಿದರು. ಖಜಾಂಚಿ ಕಣವಿ ನಟರಾಜ್ ವಂದಿಸಿದರು. ಲಯನ್ಸ್ ಪಿಯು ಕಾಲೇಜಿನ ಕಾರ್ಯದರ್ಶಿ ಸುರಭಿ ಎಸ್. ಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಬಹುಮುಖ ಪ್ರತಿಭೆ :** ಹೆಚ್.ವಿ. ಮಂಜುನಾಥ ಸ್ವಾಮಿ ಅವರದು ; ಕಲಾ ಕನ್ಸಸ್ಟ್ರಕ್ಷನ್ಸ್ ಮೂಲಕ ಕಲಾತ್ಮಕ ಕಟ್ಟಡಗಳನ್ನು ಕಟ್ಟಿಸುವುದರ ಜೊತೆಗೆ ಬದುಕು, ಭಾವನೆ, ಸ್ನೇಹ - ಸಂಬಂಧಗಳನ್ನು ಕಟ್ಟಿ ಬದುಕನ್ನು ಹೇಗೆ ಗಟ್ಟಿಗಳಿಸಿಕೊಳ್ಳಬೇಕು ಎಂಬ ಕಲೆಯನ್ನು ತಮ್ಮ ಮಾತು ಮತ್ತು ಬರಹಗಳಲ್ಲಿ ತಿಳಿಸುವುದರ ಜೊತೆ - ಜೊತೆಗೆ, ಸಾಹಿತ್ಯಿಕ - ಸಾಂಸ್ಕೃತಿಕ - ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡ ಕ್ರಿಯಾಶೀಲ ಮತ್ತು ಬಹುಮುಖ್ಯ ವ್ಯಕ್ತಿತ್ವದ ಪ್ರತಿಭೆ.

ತಮ್ಮ ವೃತ್ತಿ ಸಂಸ್ಥೆ ಫೋರಂ ಆಫ್ ಪ್ರಾಕ್ಟೀಸಿಂಗ್ ಆರ್ಕಿಟೆಕ್ಸ್ ಮತ್ತು ಸಿವಿಲ್ ಇಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷರಾಗಿ, ಚಲನಚಿತ್ರ ಅಭಿಮಾನಿಗಳ ಕ್ರಿಯಾತ್ಮಕ ಸಂಸ್ಥೆ 'ಸಿನಿಮಾ ಸಿರಿ' ಅಧ್ಯಕ್ಷರಾಗಿ, ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಮಂಜುನಾಥ ಸ್ವಾಮಿ, ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರಾಗಿ, ಶ್ರೀ ಜಗದ್ಗುರು ಜಯದೇವ ಪ್ರಸಾದ ನಿಲಯದ ನಿರ್ದೇಶಕರಾಗಿ, ಇತರೆ ಸಾಮಾಜಿಕ ಸೇವಾ ಸಂಸ್ಥೆಗಳಲ್ಲಿ ಸಕ್ರಿಯ ಪದಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

> "ಕಟ್ಟಡ ನಿರ್ಮಾಣದ ಕೆಲವು ತಾಂತ್ರಿಕ ವಿಷಯಗಳನ್ನು ಸಾಮಾನ್ಯ ಜನರಿಗೆ ತಲುಪಿಸುವ ಸದುದ್ಧೇಶದಿಂದ ಬರೆಯುವುದನ್ನು ಅಭ್ಯಾಸ ಮಾಡಿಕೊಂಡೆ. ನಂತರ ದಿನ ಕಳೆದಂತೆ ಬದುಕಿನ ಅನುಭವದ ವಿವಿಧ ವಿಷಯಗಳನ್ನು ಮಾರ್ಮಿಕವಾಗಿ ವಿಶ್ಲೇಷಿಸತೊಡಗಿದೆ. ಕೆಲವು ಸಂದರ್ಭದಲ್ಲಿ ಸತ್ಯವನ್ನು ಹೂತು ಹಾಕುವ ಮತ್ತು ಧರ್ಮ - ನೀತಿಗಳನ್ನು ಗಲ್ಲಿಗೇರಿಸುವ ವಿಷಯಗಳ ಕುರಿತು ಬರೆಯತೊಡಗಿದೆ. ಆಧುನಿಕ ಬದುಕು, ಜ್ಞಾನ ಮತ್ತು ಆಲೋಚನೆಯ ವಿಚಾರಗಳ ಮೇಲೆ ನಿಂತಿದೆ. ಎಲ್ಲಿ ಜ್ಞಾನ - ಅಧ್ಯಾತ್ಮ - ಸಂಸ್ಕಾರ, ಜೀವನದ ಅನುಭವ ಇರುತ್ತದೆಯೋ ಅಲ್ಲಿ ಸಮಸ್ಯೆಗಳು ಸುಳಿಯುವುದಿಲ್ಲ. ಇದರ ಅನುಭವದಲ್ಲಿ ರೂಪಿತಗೊಂಡಿರುವುದೇ 'ಬದುಕು - ಬಯಕೆ - ಭಾವನೆ' ಕೃತಿ.
> ಜಗತ್ತನ್ನು ಬೆಳಗಲು ಸೂರ್ಯ ಬೇಕು, ಬದುಕು ಬೆಳಗಲು ಒಂದು ಪುಸ್ತಕ ಸಾಕು. ಈ ಹಿನ್ನೆಲೆಯಲ್ಲಿ
>
> 
>
> ಪ್ರವೃತ್ತಿಯನ್ನಾಗಿಸಿಕೊಂಡಿದ್ದ ಬರಹ ನನಗೆ ಜ್ಞಾನದ ಭಂಡಾರವನ್ನು ತಂದುಕೊಟ್ಟು, ಭವಿಷ್ಯವನ್ನು ರೂಪಿಸಿತು. ಇದಕ್ಕೆ ಕಾರಣರಾದ ಪ್ರತಿಯೊಬ್ಬರಿಗೂ ನಾನು ಚಿರಋಣಿಯಾಗಿದ್ದೇನೆ.
>
> **-ಹೆಚ್.ವಿ. ಮಂಜುನಾಥ ಸ್ವಾಮಿ**

## ಎಟಿಆರ್ 72 ಏರ್‌ಪೋರ್ಟ್ ಬಗ್ಗೆ ಸಿದ್ದತೆ ಮಾಡಿಕೊಳ್ಳಿ: ಸಿದ್ದೇಶ್ವರ



ದಾವಣಗೆರೆ, ಜ.20- ಜಿಲ್ಲೆಯಲ್ಲಿ ಆರಂಭಿಸಲುದ್ದೇಶಿಸಿರುವ ಏರ್‌ಪೋ ರ್ಟ್ ಸಂಬಂಧ ಕರ್ನಾಟಕ ಮೂಲ ಸೌಕರ್ಯ ಅಭಿವೃದ್ದಿ ನಿಗಮದ ಅಧಿಕಾರಿಗಳು ಗುರುವಾರ ಜಿಲ್ಲೆಗೆ ಭೇಟಿ ನೀಡಿ ಎರಡು, ಮೂರು ಕಡೆ ಸ್ಥಳ ಪರಿಶೀಲಿಸಿ ಜನಪ್ರತಿನಿಧಿಗಳು, ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಮೂಲಸೌಕರ್ಯ ಅಭಿವೃದ್ದಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರವಿ, ಸಚಿವರ ನಿರ್ದೇಶನದಂತೆ ಸ್ಥಳ ಪರಿವೀಕ್ಷಣೆ ಮಾಡಲಾಗಿದೆ. ಈಗಾಗಲೇ ಗುರುತಿಸಿರುವ ಸ್ಥಳಗಳು ಏರ್‌ಪೋ ರ್ಟ್‌ಗೆ ಸೂಕ್ತವಾಗಿದ್ದು, ಇದರಲ್ಲಿ ಎಷ್ಟು ಸರ್ಕಾರಿ ಜಾಗ ಇದೆಯೆಂದು ಪರಿಶೀಲಿಸಬೇಕಿದೆ ಎಂದರು.

ಮುಖ್ಯವಾಗಿ ಈ ಭಾಗದಲ್ಲಿ ರೈತರ ಉತ್ಪಾದನೆಗಳು ಹೆಚ್ಚಿರುವುದರಿಂದ ಕಾರ್ಗೊ ನಿಲ್ದಾಣ ಮಾಡುವುದಾದರೆ ಹೆಚ್ಚು ಅನುಕೂಲವಾಗಲಿದೆ. ಕಾರ್ಗೊ ನಿಲ್ದಾಣಕ್ಕೆ 600 ಎಕರೆ ಜಾಗ ಬೇಕಾಗುತ್ತದೆ ಎಂದರು.

ನಿಗಮದ ಕಾರ್ಯ ನಿರ್ವಾಹಕ ನಿರ್ದೇಶಕ ಪ್ರಕಾಶ್ ಮಾತನಾಡಿ, ಈ ಸ್ಥಳ ಎಟಿಆರ್ 72 ಮಾದರಿ ಏರ್‌ಪೋರ್ಟ್ ನಿರ್ಮಿಸಲು ಸೂಕ್ತವಾಗಿದ್ದು, 340 ಎಕರೆ ಭೂಮಿ ಗುರುತಿಸಲಾಗಿದೆ. ಈ ಭಾಗದಲ್ಲಿ ಮಣ್ಣಿನ ರಚನೆ, ವಾತಾವರಣ ಸೇರಿದಂತೆ ಕೆಲ ತಾಂತ್ರಿಕ ಅಂಶಗಳನ್ನು ಅಭ್ಯಸಿಸಿ ವರದಿ ನೀಡಲಾಗುವುದು ಎಂದರು.

ಸಂಸದ ಜಿ.ಎಂ ಸಿದ್ದೇಶ್ವರ ಪ್ರತಿಕ್ರಿಯಿಸಿ, ಈಗಾಗಲೇ ವರದಿ ನೀಡಿರುವಂತೆ ಎಟಿಆರ್ 72 ಏರ್‌ಪೋರ್ಟ್ ಬಗ್ಗೆ ಸಿದ್ದತೆ ಮಾಡಿಕೊಳ್ಳಿ. ಮುಂದಿನ ಏರ್‌ಬಸ್ ನಿಲ್ದಾಣಕ್ಕೆ ಭೂಮಿಯನ್ನು ಗುರುತಿಸೋಣ ಎಂದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಏರ್ ಪೋರ್ಟ್ ಸಾಕಾರಕ್ಕೆ ಜಿಲ್ಲಾಡಳಿತದ ವತಿಯಿಂದ ಎಲ್ಲ ರೀತಿಯ ಸಹಕಾರ ನೀಡಲಾಗುವುದೆಂದರು.

ತಾಂತ್ರಿಕ ಪರಿಣಿತರಾದ ಪೂರ್ವಿಮಠ, ಪೈಲೆಟ್ ಶಮನ್, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಯಶವಂತ್‌ರಾವ್ ಜಾಧವ್, ಉಪವಿಭಾಗಾಧಿ ಕಾರಿ ಮಮತ ಹೊಸಗೌಡರ್, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ತಹಶೀಲ್ದಾರ್ ಗಿರೀಶ್ ಇತರರು ಸಭೆಯಲ್ಲಿ ಹಾಜರಿದ್ದರು.

## ಮತದಾರರನ್ನು ಕೈ ಬಿಟ್ಟ ಪ್ರಕರಣ : ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಹತಾಶೆ ಹೇಳಿಕೆ

ದಾವಣಗೆರೆ, ಜ.20- ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಹೇಳಿಕೆ ಹತಾಶೆಯಿಂದ ಕೂಡಿದ್ದು, ಅವರು ಮಾಡಿರುವ ಆರೋಪದಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟನೆ ನೀಡಿದರು.

> "ನಕಲಿ ಮತದಾರರನ್ನು ಸೃಷ್ಟಿಸಿ ಗೆಲುವು ಸಾಧಿಸುತ್ತಿರುವ ಎ. ನಾಗರಾಜ್
>
> **- ಶ್ರೀನಿವಾಸ್ ದಾಸಕರಿಯಪ್ಪ,** ಉಪಾಧ್ಯಕ್ಷರು, ಜಿಲ್ಲಾ ಬಿಜೆಪಿ

ವಿನೋಬನಗರ 16 ನೇ ವಾರ್ಡ್‌ನಲ್ಲಿ ಕೇವಲ 6500 ರಿಂದ 7000 ನೈಜ ಮತದಾರರಿದ್ದಾರೆ. ಆದರೆ, ಪಟ್ಟಿಯಲ್ಲಿ 9500 ಮತದಾರರಿದ್ದು, ಸುಮಾರು 2500 ರಿಂದ 3000 ನಕಲಿ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಪ್ರಾಮಾಣಿಕ ಮತದಾರರಿದ್ದರೆ ಅಂತಹವರನ್ನು ಪಟ್ಟಿಗೆ ಸೇರ್ಪಡೆ ಮಾಡಲಿ, ನಮ್ಮ ಆಕ್ಷೇಪಣೆಯಿಲ್ಲ. ಸ್ವಂತ ಮನೆ ಇದೆ. ಆದರೆ ಕಳೆದ 20 ವರ್ಷಗಳಿಂದ ವಾಸವಾಗಿರದೇ, ಬೇರೆ ಕಡೆ ವಾಸವಾಗಿದ್ದಾರೆ. ಮತ್ತೆ ಕೆಲವರು ಎರಡು ಕಡೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಿದ್ದಾರೆ. ನಕಲಿ ಮತದಾರರನ್ನು ಮಾತ್ರ ಪಟ್ಟಿಯಿಂದ ಅಳಿಸಿ ಹಾಕಲಾಗಿದೆ ಎಂದು ಅವರು ಹೇಳಿದರು.

ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಮತ ಹಾಕದ ಮತದಾರರು, ಕೇವಲ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮಾತ್ರ ಮತ ಹಾಕಲು ಬರುತ್ತಾರೆ. ಎ. ನಾಗರಾಜ್ ಮತ್ತವರ ಕುಟುಂಬದವರು ಚುನಾವಣೆಗೆ ಸ್ಪರ್ಧಿಸಿದಾಗ ಮಾತ್ರ ಮತ ಪಟ್ಟಿಯಲ್ಲಿ ನಕಲಿ ಮತದಾರರನ್ನು ಸೇರಿಸಲಾಗುತ್ತಿದೆ ಎಂದು ಆರೋಪಿಸಿದರು.

ಎ. ನಾಗರಾಜ್ ಕಳೆದ 15 ವರ್ಷಗಳಿಂದ ನಕಲಿ ಮತದಾರರನ್ನು ಸೃಷ್ಟಿಸುವ ಕೆಲಸ ಮಾಡುತ್ತಾ ಬಂದಿದ್ದಾರೆ. ಇದೀಗ ನಕಲಿ ಮತದಾರರ ಹೆಸರುಗಳನ್ನು ಡಿಲೀಟ್ ಮಾಡಿದ್ದಾರೆಂದು ವಿನಾಕಾರಣ ಅಮಾಯಕ ಅಧಿಕಾರಿಗಳ ಮೇಲೆ ಆರೋಪ ಮಾಡುವುದು ಸರಿಯಲ್ಲ ಎಂದು ಶ್ರೀನಿವಾಸ್ ದಾಸಕರಿಯಪ್ಪ ತಿಳಿಸಿದರು.

**ಸದಸ್ಯತ್ವ ವಜಾಗೊಳಿಸಲಿ:** ಪಾಲಿಕೆ ಚುನಾವಣೆ ಸಂದರ್ಭದಲ್ಲಿ ಅಕ್ರಮವಾಗಿ ಗೆಲುವು ಸಾಧಿಸಿರುವ ಎ. ನಾಗರಾಜ್ ಅವರ ಸದಸ್ಯತ್ವವನ್ನು ವಜಾಗೊಳಿಸುವಂತೆ ಅವರು ಚುನಾವಣಾ ಆಯೋಗವನ್ನು ಆಗ್ರಹಿಸಿದರು.

ಚುನಾವಣಾ ಸಂದರ್ಭದಲ್ಲಿ ಆಯೋಗದ ನಿಯಮಗಳನ್ನು ಗಾಳಿಗೆ ತೂರಿ, ಅಕ್ರಮವಾಗಿ ಗೆದ್ದಿದ್ದಾರೆ. ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಮತ್ತೊಮ್ಮೆ ಸ್ಪರ್ಧೆ ಮಾಡಿ ಗೆಲ್ಲಲಿ ಎಂದು ಅವರು ಸವಾಲು ಎಸೆದರು.

**ವಿಪಕ್ಷ ಕಚೇರಿ ಜಾಗ ತೆರವುಗೊಳಿಸಲಿ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ ಬೇರೆ ಯಾವುದೇ ಪಾಲಿಕೆಗಳಲ್ಲಿ ವಿಪಕ್ಷ ನಾಯಕರಿಗೆ ಪ್ರತ್ಯೇಕ ಕಚೇರಿ ಮತ್ತು ಸಿಬ್ಬಂದಿ ಇರುವುದಿಲ್ಲ. ಆದರೆ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ವಿಪಕ್ಷ ನಾಯಕರಿಗೆ ಪ್ರತ್ಯೇಕ ಕೊಠಡಿ ಮತ್ತು ಸಿಬ್ಬಂದಿಯನ್ನು ಒದಗಿಸಿರುವುದು ಕಾನೂನು ಬಾಹಿರವಾಗಿದ್ದು, ಕೂಡಲೇ ಕಚೇರಿ ತೆರವುಗೊಳಿಸಿ, ಅಲ್ಲಿನ ಸಿಬ್ಬಂದಿಯನ್ನು ಬೇರೆ ಕಡೆ ನಿಯೋಜಿಸುವಂತೆ ಬಿಜೆಪಿ ಕಾನೂನು ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಎ.ಸಿ. ರಾಘವೇಂದ್ರ ಒತ್ತಾಯಿಸಿದರು.

ಮಹಾನಗರ ಪಾಲಿಕೆ ಸ್ಥಾಯಿ ಸಮಿತಿಗಳ ಅಧ್ಯಕ್ಷರಿಗೆ ವಾಹನ ನೀಡುವ ಅವಕಾಶವಿಲ್ಲ. ವಾಪಸ್ ಪಡೆಯಬೇಕೆಂಬ ನಾಗರಾಜ್ ಹೇಳಿಕೆ ಸಲ್ಲದು. ಅವರಿಗೆ ಯಾವುದೇ ನೈತಿಕತೆ ಇಲ್ಲ. ಮೊದಲು ಅವರು ವಿಪಕ್ಷ ನಾಯಕರ ಕೊಠಡಿ ತೆರವು ಮಾಡಲಿ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕಾಂತ ರಾಜ್, ಯಲ್ಲಪ್ಪ ಪವಾರ್, ಕಿರಣ್ ಕುಮಾರ್, ಎ. ಎಸ್. ಮಂಜುನಾಥ್, ಕೆ.ಹೆಚ್. ಹಾಲೇಶ್, ಪುನೀತ್, ಮಂಜುನಾಥ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದಿನ ಪುರಾಣ - ಪ್ರವಚನದಲ್ಲಿ 10 ತುಲಾಭಾರ



ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಡೆಯುತ್ತಿರುವ ಒಂದು ತಿಂಗಳ ಪರ್ಯಂತದ ಮುಗುಳಖೋಡದ ಶ್ರೀ ಯಲ್ಲಾಲಿಂಗೇಶ್ವರ ಘನ ಲೀಲಾಮೃತ ಪುರಾಣ ಪ್ರವಚನದಲ್ಲಿ ಇಂದು 10 ತುಲಾಭಾರ ಕಾರ್ಯಕ್ರಮ ಜರುಗಲಿದೆ.

ಇದೇ ಸಂದರ್ಭದಲ್ಲಿ ಶ್ರೀ ವೀರೇಶ್ವರ ಪುಣ್ಯಾಶ್ರಮ (ಗದಗ - ದಾವಣಗೆರೆ - ಶಿವಮೊಗ್ಗದ ಪೀಠಾಧಿಪತಿ ಶ್ರೀ ಕಲ್ಲಯ್ಯಜ್ಜನವರಿಗೆ ಭಕ್ತಾದಿಗಳಿಂದ 10 ತುಲಾಭಾರ ಕಾರ್ಯಕ್ರಮಗಳು ನಡೆಯಲಿವೆ.

ಪ್ರವಚನ ಪ್ರವೀಣ ಶ್ರೀ ತೋಟೇಂದ್ರ ಶಾಸ್ತ್ರಿಗಳು (ಅಬ್ಬೆ - ತುಮಕೂರು) ಈ ಪ್ರವಚನವನ್ನು ನಡೆಸಿಕೊಡುತ್ತಿದ್ದು, ಭಕ್ತಾದಿಗಳು, ಸಾರ್ವಜನಿಕರು ಭಾಗವಹಿಸುವಂತೆ ಕಾರ್ಯಕ್ರಮದ ಸಂಚಾಲಕ ಅಜ್ಜಂಪುರ ಶೆಟ್ರು ಮೃತ್ಯುಂಜಯ ತಿಳಿಸಿದ್ದಾರೆ.

## ರಾಜ್ಯ ಬಿಜೆಪಿ ಆಡಳಿತದಲ್ಲಿ ಶೀಘ್ರ ಹೊಸ ಬದಲಾವಣೆ: ಯತ್ನಾಳ್

ಬೆಂಗಳೂರು, ಜ.20- ರಾಜ್ಯ ಬಿಜೆಪಿ ಆಡಳಿತದಲ್ಲಿ ಹೊಸ ಬದಲಾವಣೆ ಆಗಲಿದೆ ಎಂದು ಪಕ್ಷದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಇಂದಿಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ರೇಣುಕಾಚಾರ್ಯ ಅವರ ಜೊತೆ ಸುಮಾರು 90 ನಿಮಿಷಗಳ ಕಾಲ ಅವರ ಕಚೇರಿಯಲ್ಲಿ ಮಾತನಾಡಿ ಹೊರ ಬಂದ ನಂತರ ಸುದ್ದಿಗಾರರಿಗೆ ಆಡಳಿತದ ಬದಲಾವಣೆಯ ಮಾಹಿತಿ ನೀಡಿದರು.

ಗುಜರಾತ್ ಮಾದರಿಯೋ ಅಥವಾ ಕರ್ನಾಟಕಕ್ಕೆ ಪ್ರತ್ಯೇಕ ಮಾದರಿಯೋ ಎಂದು ತಿಳಿಯದು. ಆದರೆ ವರಿಷ್ಠರು ಒಳ್ಳೆಯ ಸುದ್ದಿಯಂತೂ ನೀಡಲಿದ್ದಾರೆ.

**ಕುತೂಹಲ ಮೂಡಿಸಿದ ಶಾಸಕ ರೇಣುಕಾಚಾರ್ಯ ಯತ್ನಾಳ್ ಭೇಟಿ, ಚರ್ಚೆ**

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಂಪುಟ ಪುನರ್ ರಚನೆ ಮಾಡುತ್ತಾರೋ ಅಥವಾ ಕಾಮರಾಜ ಸೂತ್ರ ಅಳವಡಿಸುತ್ತಾರೋ ನನಗೆ ತಿಳಿಯದು. ಆದರೆ ಗುಜರಾತಿಗೆ ವಿಭಿನ್ನವಾಗಿ ಕರ್ನಾಟಕದಲ್ಲಿ ಬದಲಾವಣೆಯಾಗಲಿದೆ ಎಂದು ಮುಗುಂ ಆಗಿ ಹೇಳಿದರು.

ಒಂದು ವೇಳೆ ಮಂತ್ರಿಮಂಡಲ ಪುನರ್‌ರಚನೆಯಾದರೆ ಒಂದು ವಾರದಲ್ಲೇ ಆಗಬೇಕು. ಮಾರ್ಚ್ ನಂತರವಾದರೆ ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ.

ಅಧಿಕಾರ ತೆಗೆದುಕೊಳ್ಳುವವರು ಮುಂದಿನ ಚುನಾವಣೆಯ ಗುಂಗಿನಲ್ಲೇ ಇರುತ್ತಾರೆ. ಅದರಿಂದ ಒಳ್ಳೆ ಆಡಳಿತ ನೀಡಲು ಸಾಧ್ಯವಿಲ್ಲ. ಎಂತಹದ್ದೇ ತೀರ್ಮಾನವಾದರೂ, ಇನ್ನೊಂದು ವಾರದೊಳಗೆ ಪಕ್ಷದ ವರಿಷ್ಠರು ತೀರ್ಮಾನ ಕೈಗೊಳ್ಳಬೇಕೆಂದರು.

ನೀವು ಮಂತ್ರಿಯಾಗುತ್ತೀರಾ? ಎಂಬ ಪ್ರಶ್ನೆಗೆ, ನಾನು ಯಾವುದೇ ಅಧಿಕಾರ ಬಯಸಿಲ್ಲ. ಪಕ್ಷ ತೆಗೆದುಕೊಳ್ಳುವ ತೀರ್ಮಾನದಂತೆ ನಡೆದುಕೊಳ್ಳುತ್ತೇನೆ. ನಾನೊಬ್ಬ ನಿಷ್ಠಾವಂತ ಕಾರ್ಯಕರ್ತ. ರೇಣುಕಾಚಾರ್ಯ ಅವರು ಯಾರು ಮುಖ್ಯಮಂತ್ರಿಯಾಗುತ್ತಾರೋ ಅವರಿಗೆ ಬೆಂಬಲವಾಗಿ ನಿಲ್ಲುತ್ತಾರೆ. ಅವರು ಮಂತ್ರಿಯಾಗಲಿ ಎಂದರು.

ಇದಕ್ಕೆ ತದ್ವಿರುದ್ದವಾಗಿ ಮಾತನಾಡಿದ ರೇಣುಕಾಚಾರ್ಯ, ಗುಜರಾತ್ ಮಾದರಿಯಲ್ಲಿ ಸಂಪುಟ ಪುನರ್ ರಚನೆಯಾಗಬೇಕು. ಪಕ್ಷದ ನಿಷ್ಠರು ಹಾಗೂ ಹೊಸಬರಿಗೆ ಅವಕಾಶ ಕೊಟ್ಟರೆ ಚುನಾವಣೆಯಲ್ಲಿ ಗೆಲ್ಲಲು ಅನುಕೂಲವಾಗುತ್ತದೆ.

ಪಕ್ಷದ ಪ್ರಮುಖರ ಗಮನಕ್ಕೆ ತರಬೇಕೆಂದು ಉಭಯ ನಾಯಕರು ಪರಸ್ಪರ ಚರ್ಚೆ ನಡೆಸಿದ್ದಾಗಿ ತಿಳಿಸಿದರು.

ನಮ್ಮದು ಆಕಸ್ಮಿಕ ಸೌಜನ್ಯದ ಭೇಟಿ, ಮುಂದೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು ಎನ್ನುವ ಸದುದ್ಧೇಶದಿಂದ ಮಾತುಕತೆ ನಡೆಸಿದ್ದೇವೆ. ಈ ಸಭೆ ಯಾರ ವಿರುದ್ಧವೂ ನಡೆಸಿಲ್ಲ. ಪಕ್ಷ ಸಂಘಟನೆಗೆ ದುಡಿದವರನ್ನು ಸಂಪುಟದಲ್ಲಿ ಮುಂದುವರೆಸಲಿ. ಉಳಿದವರನ್ನು ಪಕ್ಷದ ಕಾರ್ಯಕ್ಕೆ ಬಳಸಿಕೊಳ್ಳಲಿ ಎಂದರು.

## ಭರಮಸಾಗರದಲ್ಲಿ ಇಂದು

ಶ್ರೀ ಶಾಂತಲಾ ಮಹಿಳಾ ಮಂಡಳಿ ವತಿಯಿಂದ ಟೈಲರಿಂಗ್ ತರಬೇತಿ ಪಡೆದ ಮಹಿಳೆಯರಿಗೆ ದೊಡ್ಡಪೇಟೆಯಲ್ಲಿರುವ ಶ್ರೀ ಶಿವಯೋಗಿ ಮಂದಿರದ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಪ್ರಶಸ್ತಿ ಪತ್ರ ವಿತರಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಶಾಂತಲಾ ಮಹಿಳಾ ಮಂಡಳಿಯ ಮುಖ್ಯಸ್ಥರಾದ ಶ್ರೀಮತಿ ವೀಣಾ ಶಿವಯೋಗಿ ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ 152 ಪಾಸಿಟಿವ್

ದಾವಣಗೆರೆ, ಜ.20- ಜಿಲ್ಲೆಯಲ್ಲಿ ಗುರುವಾರ 152 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ. 95 ಜನರು ಗುಣಮುಖರಾಗಿದ್ದಾರೆ. 1218 ಸಕ್ರಿಯ ಪ್ರಕರಣಗಳಿವೆ. ದಾವಣಗೆರೆ ತಾಲ್ಲೂಕಿನಲ್ಲಿ 86, ಹರಿಹರ 13, ಚನ್ನಗಿರಿ 34, ಹೊನ್ನಾಳಿ 10, ಜಗಳೂರು 5 ಹಾಗೂ ಹೊರ ಜಿಲ್ಲೆಯ ನಾಲ್ವರಲ್ಲಿ ಸೋಂಕು ಕಾಣಿಸಿಕೊಂಡಿದೆ.

## ಚಿಕ್ಕಬಿದರಿ ಗ್ರಾಮದ ಪರಿಸರ ಮಾಲಿನ್ಯ ತಡೆಗೆ ಶಾಶ್ವತ ಪರಿಹಾರ

ದಾವಣಗೆರೆ, ಜ. 20- ಹರಿಹರ ತಾಲ್ಲೂಕು ಚಿಕ್ಕಬಿದರಿ ಗ್ರಾಮಕ್ಕೆ ಸಕ್ಕರೆ ಹಾಗೂ ಡಿಸ್ಟಿಲರಿ ಕಾರ್ಖಾನೆಗಳಿಂದ ಉಂಟಾಗುವ ಪರಿಸರ ಮಾಲಿನ್ಯ ತಡೆಗೆ ಕಾರ್ಖಾನೆಯವರು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಶಾಶ್ವತ ಪರಿಹಾರ ಕಂಡುಕೊಳ್ಳಲು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಆಯಾ ಕಾರ್ಖಾನೆಗಳಿಗೆ ಕಾಲಮಿತಿ ನಿಗದಿಪಡಿಸಿ ಸೂಚನೆ ನೀಡಿದ್ದಾರೆ.

ಚಿಕ್ಕಬಿದರಿ ಗ್ರಾಮದ ಸುತ್ತಮುತ್ತ ಸಕ್ಕರೆ ಕಾರ್ಖಾನೆ ಹಾಗೂ ಡಿಸ್ಟಿಲರಿ ಕಾರ್ಖಾನೆಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ತಡೆಗಟ್ಟುವ ಕುರಿತಂತೆ ಕಾರ್ಖಾನೆಯವರು, ಪರಿಸರ ಅಧಿಕಾರಿಗಳು, ಗ್ರಾಮಸ್ಥರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಲಾದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಾಮನೂರು ಶುಗರ್ಸ್ ಹಾಗೂ ಶ್ಯಾಮ್‌ಸನ್ ಡಿಸ್ಟಿಲರಿ ಕಾರ್ಖಾನೆಯಿಂದ ಹಾರುಬೂದಿ ಹಾಗೂ ತ್ಯಾಜ್ಯ ನೀರು ಬಿಡುಗಡೆಯ ಕಾರಣದಿಂದಾಗಿ ಚಿಕ್ಕಬಿದರಿ ಗ್ರಾಮ ವ್ಯಾಪ್ತಿಯಲ್ಲಿ ಗಾಳಿ, ನೀರು ಮಲಿನವಾಗುತ್ತಿರುವ ಬಗ್ಗೆ ಗ್ರಾಮಸ್ಥರಿಂದ ಹಲವು ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಕೈ ಗೊಂಡ ಕ್ರಮಗಳ ಬಗ್ಗೆ ವಿಜಯನಗರ ಹಾಗೂ ದಾವಣಗೆರೆ ಜಿಲ್ಲೆಯ ಪರಿಸರ ಅಧಿಕಾರಿಗಳನ್ನು ಪ್ರಶ್ನಿಸಿದರು.

ವಿಜಯನಗರ ಜಿಲ್ಲೆ ಪರಿಸರ ಅಧಿಕಾರಿ ರಾಜು ಮಾತನಾಡಿ, ಎರಡೂ ಕಾರ್ಖಾನೆಗಳಿಂದ ಮಾಲಿನ್ಯವಾಗುತ್ತಿರುವುದು ಕಂಡುಬಂದಿದ್ದು, ನೋಟಿಸ್ ನೀಡಿ ಮಾಲಿನ್ಯ ತಡೆಗೆ ಶಿಫಾರಸ್ಸು ಮಾಡಲಾಗಿದೆ ಎಂದರು.

> "ಗ್ರಾಮಸ್ಥರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ

ಕಾರ್ಖಾನೆಗಳನ್ನು ನೆಚ್ಚಿಕೊಂಡು ನೂರಾರು ಕುಟುಂಬಗಳು ಜೀವನ ಕಟ್ಟಿಕೊಂಡಿವೆ. ಆದರೆ ಕಾರ್ಖಾನೆಗಳೂ ಕೂಡ ಜನರ ಬದುಕಿಗೆ ತೊಂದರೆ ಉಂಟು ಮಾಡುತ್ತಿರುವುದನ್ನೂ ಕೂಡ ಒಪ್ಪಲು ಸಾಧ್ಯವಿಲ್ಲ. ಕಾರ್ಖಾನೆಗಳು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು, ಮಾಲಿನ್ಯ ರಹಿತ ಉದ್ಯಮ ನಡೆಸಬೇಕು ಎಂದು ತಾಕೀತು ಮಾಡಿದರು.

ಸಭೆಯಲ್ಲಿ ಭಾಗವಹಿಸಿದ್ದ ಗ್ರಾಮ ಪಂಚಾಯಿತಿ ಸದಸ್ಯ ಮಹಾಂತೇಶ್ ಹೆಚ್.ಬಿ., ಗ್ರಾಮಸ್ಥ ಬಸಪ್ಪ, ಹಾಲೇಶ್.ಜಿ, ಸ್ವಾಮಿ ಅವರುಗಳು ಕಾರ್ಖಾನೆಗಳಿಂದ ಗ್ರಾಮಸ್ಥರು ಹಾಗೂ ಜಾನುವಾರುಗಳ ಮೇಲಾಗುತ್ತಿರುವ ಪರಿಣಾಮಗಳ ಬಗ್ಗೆ ಸಭೆಯ ಗಮನಕ್ಕೆ ತಂದರು.

ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ಡಿಹೆಚ್ಓ ಡಾ. ನಾಗರಾಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿಜಯಕುಮಾರ್, ಸೇರಿದಂತೆ, ಹರಪನಹಳ್ಳಿ ತಾಲ್ಲೂಕು ತಹಶೀಲ್ದಾರ್, ಹರಿಹರ ತಹಶೀಲ್ದಾರ್, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು, ಪೊಲೀಸ್ ಇಲಾಖೆ ಅಧಿಕಾರಿಗಳು ಅಲ್ಲದೆ ಚಿಕ್ಕಬಿದರಿ ಗ್ರಾಮಸ್ಥರು ಸಭೆಯಲ್ಲಿದ್ದರು.

## ದಾವಿವಿ ಅಂತರ ಕಾಲೇಜು ಚೆಸ್ ಪಂದ್ಯಾವಳಿಗೆ ಚಾಲನೆ

ದಾವಣಗೆರೆ, ಜ.20- ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯಯರ ಚೆಸ್ ಪಂದ್ಯಾವಳಿ ಮತ್ತು ಆಯ್ಕೆ ಪ್ರಕ್ರಿಯೆಗೆ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಸಭಾಂಗಣದಲ್ಲಿ ಗುರುವಾರ ಚಾಲನೆ ನೀಡಲಾಯಿತು.

ದಾವಣಗೆರೆ ವಿವಿ ಹಾಗೂ ಚಿತ್ರದುರ್ಗ ಸ್ನಾತಕೋತ್ತರ ಕೇಂದ್ರದಡಿಯಲ್ಲಿ ಬರುವ ವಿವಿಧ ಕಾಲೇಜುಗಳಿಂದ ಪ್ರತಿ ತಂಡದಲ್ಲಿ ಆರು ಸ್ಪರ್ಧಿಗಳುಳ್ಳ 10 ಮಹಿಳೆಯರ ತಂಡ ಹಾಗೂ 20 ಪುರುಷರ ತಂಡಗಳು ಚೆಸ್ ಪಂದ್ಯಾವಳಿಗೆ ಆಗಮಿಸಿದ್ದವು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ದಾವಣಗೆರೆ ವಿವಿ ದೈಹಿಕ ಶಿಕ್ಷಣ ವಿಭಾಗದ ಡೀನ್ ಹಾಗೂ ಪ್ರಭಾರ ನಿರ್ದೇಶಕ ಡಾ.ಕೆ.ವೆಂಕಟೇಶ್, 'ಮೈಂಡ್ ಗೇಮ್' ಎಂದೇ ಹೇಳುವ ಚೆಸ್ ಕ್ರೀಡೆಯು ಏಕಾಗ್ರತೆಯನ್ನು ಹೆಚ್ಚಿಸುತ್ತದೆ ಎಂದರು.

ಪ್ರತಿ ವರ್ಷ ಚೆಸ್ ಕ್ರೀಡಾಕೂಟ ನಡೆಸಲಾಗುತ್ತಿತ್ತು. ಆದರೆ ಕಳೆದ ಎರಡು ವರ್ಷ ಕೊರೊನಾ ಹಿನ್ನೆಲೆಯಲ್ಲಿ ಕ್ರೀಡಾಕೂಟ ನಡೆಸಲು ಸಾಧ್ಯವಾಗಿರಲಿಲ್ಲ. ಇದೀಗ ಮತ್ತೆ ಆಯೋಜಿಸಿರುವುದು ಸಂತಸ ತಂದಿದೆ ಎಂದರು.



**ಚೆಸ್** **ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯಯರ ಚೆಸ್ ಪಂದ್ಯಾವಳಿ ಮತ್ತು ಆಯ್ಕೆ ಪ್ರಕ್ರಿಯೆಗೆ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಸಭಾಂಗಣದಲ್ಲಿ ಗುರುವಾರ ಚಾಲನೆ ನೀಡಲಾಯಿತು.**

ದಾವಿವಿಯಿಂದ ಪ್ರತಿ ವರ್ಷ ಸುಮಾರು 50 ಲಕ್ಷರೂ.ಗಳನ್ನು ಕ್ರೀಡಾಕೂಟಗಳಿಗಾಗಿಯೇ ಬಳಕೆ ಮಾಡಲಾಗುತ್ತದೆ. ಕೊರೊನಾದಿಂದಾಗಿ ನಾಲ್ಕೈದು ಲಕ್ಷ ರೂ. ಮಾತ್ರ ಬಳಕೆಯಾಗಿದೆ. ಪ್ರಸ್ತುತ ಆಯೋಜಿಸಿರುವ ಕ್ರೀಡಾಕೂಟದಲ್ಲಿ ಸುಮಾರು 60 ಕಾಲೇಜುಗಳ ವಿದ್ಯಾರ್ಥಿಗಳು ಆಗಮಿಸಿರುವುದಾಗಿ ಹೇಳಿದರು.

ಬಾಪೂಜಿ ಬಿ-ಸ್ಕೂಲ್ ನಿರ್ದೇಶಕ ಡಾ.ಸ್ವಾಮಿ ತ್ರಿಭುವಾನಂದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಬಾಪೂಜಿ ಎಂ.ಬಿ.ಎ. ಕಾಲೇಜು ಆವರಣ ಎಲ್ಲಾ ರೀತಿಯ ಕ್ರೀಡಾಕೂಟಗಳನ್ನು ನಡೆಸಲು ಅತ್ಯುತ್ತಮ ಸ್ಥಳವಾಗಿದೆ. ಇದೊಂದು ಸ್ಪೋರ್ಟ್ಸ್ ಕ್ಯಾಂಪಸ್ ಎಂದರೆ ತಪ್ಪಾಗಲಾರದು ಎಂದರು.

ಬಿ.ಐ.ಹೆಚ್.ಇ. ಪ್ರಾಂಶುಪಾಲ ಡಾ.ಬಿ. ವೀರಪ್ಪ, ಪ್ರಾಂಶುಪಾಲ ನವೀನ್, ಸದಾಶಿವಪ್ಪ ಇತರರು ಉಪಸ್ಥಿತರಿದ್ದರು. ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರೀಸರ್ಚ್ ಸಹಯೋಗದಲ್ಲಿ 2 ದಿನಗಳ ಕಾಲ ಪಂದ್ಯಾವಳಿ ನಡೆಯಲಿದೆ.

# ದೇಶದಲ್ಲಿ ಉದ್ವಿಗ್ನತೆ, ಹಿಂಸಾಚಾರದ ವಾತಾವರಣ

## ಮೋದಿ ಉಪಸ್ಥಿತಿಯಲ್ಲಿ ರಾಜಸ್ಥಾನದ ಸಿಎಂ ಗೆಹ್ಲೋಟ್ ಹೇಳಿಕೆ

ಜೈಪುರ, ಜ. 20 – ದೇಶದಲ್ಲಿ ಉದ್ವಿಗ್ನತೆ ಹಾಗೂ ಹಿಂಸಾಚಾರದ ವಾತಾವರಣ ಇದೆ ಎಂದು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಉಪಸ್ಥಿತಿಯಲ್ಲಿ ಹೇಳಿದ್ದಾರೆ.

ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ವರ್ಷವಿಡೀ ಆಯೋಜಿಸಿರುವ ಕಾರ್ಯಕ್ರಮಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 75 ವರ್ಷಗಳಲ್ಲಿ ಯಾವುದೇ ಬೆಳವಣಿಯಾಗಿಲ್ಲ ಎಂಬ ಆರೋಪಗಳಿಗೂ ತಿರುಗೇಟು ನೀಡಿದ್ದಾರೆ.

'ಆಜಾದಿ ಕಾ ಅಮೃತ್ ಮಹೋತ್ಸವ್ ಸೆ ಸ್ವರ್ಣಿಮ್ ಭಾರತ್ ಕಿ ಓರ್' ಎಂಬ ಕಾರ್ಯಕ್ರಮವನ್ನು ಬ್ರಹ್ಮಾಕುಮಾರಿ ಆನ್‌ಲೈನ್ ಮೂಲಕ ಆಯೋಜಿಸಿತ್ತು.


ದೇಶದಲ್ಲಿ ಉದ್ವಿಗ್ನತೆ ಹಾಗೂ ಹಿಂಸಾಚಾರದ ವಾತಾವರಣ ಇದೆ. ಹೀಗಾಗಿ ಶಾಂತಿ, ಸೌಹಾರ್ದತೆ ಹಾಗೂ ಸಹೋದರತ್ವ ಬಲಪಡಿಸುವ ಅಗತ್ಯವಿದೆ ಎಂದು ಗೆಹ್ಲೋಟ್ ಹೇಳಿದ್ದಾರೆ.

ಕಳೆದ 75 ವರ್ಷಗಳಲ್ಲಿ ವಿಜ್ಞಾನ, ತಂತ್ರಜ್ಞಾನ ಹಾಗೂ ಇತರೆ ವಲಯಗಳಲ್ಲಿ ಆಗಿರುವ ಬೆಳವಣಿಗೆಗಳ ಕಾರಣದಿಂದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬೇರೆ ದೇಶಗಳಿಗೆ ಭೇಟಿ ನೀಡಿದಾಗ ಗೌರವ ದೊರೆಯುತ್ತಿದೆ ಎಂದು ಗೆಹ್ಲೋಟ್ ಹೇಳಿದ್ದಾರೆ.

ನಮಗೆ ಭವ್ಯವಾದ ಇತಿಹಾಸ ಇದೆ. ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು, ಸರ್ದಾರ್ ಪಟೇಲ್, ಬಿ.ಆರ್. ಅಂಬೇಡ್ಕರ್, ಲೋಕಮಾನ್ಯ ತಿಲಕ್ ಮತ್ತಿತರರು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿ ನಮಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟಿದ್ದಾರೆ ಎಂದೂ ಗೆಹ್ಲೋಟ್ ಹೇಳಿದ್ದಾರೆ.

ಇದಕ್ಕೂ ಮುಂಚೆ ಮಾತನಾಡಿದ್ದ ಪ್ರಧಾನಿ ಮೋದಿ, ದೇಶದ ಪ್ರಗತಿಗಾಗಿ ಕರ್ತವ್ಯಕ್ಕೆ ಪ್ರಾಮುಖ್ಯತೆ ನೀಡಬೇಕಿದೆ ಎಂದಿದ್ದರು. ಇಷ್ಟೆಲ್ಲಾ ವರ್ಷಗಳಲ್ಲಿ ಜನರು ಹಕ್ಕುಗಳಿಗಾಗಿಯೇ ಹೋರಾಟ ಮಾಡುತ್ತಾ ಬಂದಿದ್ದಾರೆ. ಹಕ್ಕುಗಳ ಬಗ್ಗೆ ಮಾತನಾಡುವುದು ಕೆಲ ಪರಿಸ್ಥಿತಿಗಳಲ್ಲಿ ಒಳ್ಳೆಯದು. ಆದರೆ, ಕರ್ತವ್ಯಗಳನ್ನು ಸಂಪೂರ್ಣವಾಗಿ ಮರೆಯುವುದರಿಂದ ದೇಶ ದುರ್ಬಲವಾಗುತ್ತದೆ ಎಂದು ಪ್ರಧಾನಿ ಎಚ್ಚರಿಸಿದ್ದರು.

## ನಗರದಲ್ಲಿಂದು ಸಿದ್ದಲಿಂಗ ಶ್ರೀಗಳ ಪುಣ್ಯಸ್ಮರಣೆ



ಹೊಳೆಹೊನ್ನೂರು ತೋಟದಲ್ಲಿರುವ ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ಉಜ್ಜಯಿನಿ ಜಗದ್ಗುರು ಲಿಂ. ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ 86ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮವನ್ನು ಕೊರೊನಾ ಕಾರಣದಿಂದ ಇಂದು ಸರಳವಾಗಿ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಅಧ್ಯಕ್ಷ ಎ.ಎಸ್.ಜಯರಾಜ್, ಅರ್ಚಕರಾದ ಉದಯಶಂಕರ ಶಾಸ್ತ್ರಿಗಳು ತಿಳಿಸಿದ್ದಾರೆ.

## ಆರ್.ಜಿ. ವಿದ್ಯಾಸಂಸ್ಥೆಯ ಘಟಿಕೋತ್ಸವ



ದಾವಣಗೆರೆ, ಜ.20- ನಗರದ ಸಿದ್ಧವೀರಪ್ಪ ಬಡಾವಣೆ ಸಮೀಪವಿರುವ ಆರ್.ಜಿ. ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ನ 2018 ನೇ ಸಾಲಿನ ಸ್ನಾತಕ ಪದವಿಯ ವಿದ್ಯಾರ್ಥಿಗಳ ಘಟಿಕೋತ್ಸವ ಸಮಾರಂಭವು ಬಂಟರ ಸಮುದಾಯ ಭವನದಲ್ಲಿ ಇಂದು ನಡೆಯಿತು.

ವಿಧಾನಪರಿಷತ್ ಮಾಜಿ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಆರ್.ಜಿ. ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ವೇತಾ ಆರ್. ಗಾಂಧಿ, ಮುಖ್ಯ ವ್ಯವಸ್ಥಾಪಕರಾದ ರಜತ್ ಎಸ್. ಕಟ್ಟಿಮನಿ, ಮುಖ್ಯ ಸಲಹೆಗಾರರಾದ ದಾನಪ್ಪ, ಪ್ರಾಂಶುಪಾಲ ಸುನೀಲ್ ಕುಮಾರ್, ಉಪ ಪ್ರಾಂಶುಪಾಲರಾದ ಜಿ.ಕೆ. ಗೀತಾ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## 3ನೇ ಅಲೆಯಲ್ಲಿ ಸಾವು ಕಡಿಮೆ

**ಕೇಂದ್ರ**

ನವದೆಹಲಿ, ಜ. 20 – ಹಿಂದಿನ ಕೊರೊನಾ ಅಲೆಗಳಿಗೆ ಹೋಲಿಸಿದರೆ, ಮೂರನೇ ಅಲೆ ಸಂದರ್ಭದಲ್ಲಿ ಸಾವುಗಳ ಪ್ರಮಾಣ ಕಡಿಮೆ ಇದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಏಪ್ರಿಲ್ 30, 2021ರಲ್ಲಿ 3.86 ಲಕ್ಷ ಕೊರೊನಾ ಪ್ರಕರಣಗಳು ಕಂಡು ಬಂದಿದ್ದವು. ಆ ದಿನ 3,059 ಸಾವುಗಳು ಸಂಭವಿಸಿದ್ದವು ಹಾಗೂ 31.70 ಲಕ್ಷ ಸಕ್ರಿಯ ಸೋಂಕಿತರಿದ್ದರು. ಆ ಸಂದರ್ಭದಲ್ಲಿ ಪೂರ್ಣ ಲಸಿಕೆ ಪಡೆದವರ ಪ್ರಮಾಣ ಶೇ.2ರಷ್ಟಿತ್ತು ಎಂದಿದ್ದಾರೆ.

ಜನವರಿ 20, 2022ರಂದು 3.17 ಲಕ್ಷ ಹೊಸ ಪ್ರಕರಣಗಳು ಕಂಡು ಬಂದಿವೆ. ಈ ದಿನ 19.24 ಲಕ್ಷ ಸಕ್ರಿಯ ಸೋಂಕಿತರಿದ್ದರೆ, 380 ಸಾವುಗಳು ಸಂಭವಿಸಿವೆ. ಈ ದಿನ ಪೂರ್ಣ ಲಸಿಕೆ ಪಡೆದವರ ಪ್ರಮಾಣ ಶೇ.72ರಷ್ಟಿದೆ ಎಂದವರು ಹೋಲಿಸಿದ್ದಾರೆ.

ಸಕ್ರಿಯ ಪ್ರಕರಣಗಳಿಗೆ ಹೋಲಿಸಿದರೆ ಸಾವಿನ ಪ್ರಮಾಣ ಕಡಿಮೆ ಇದೆ. ಮೂರನೇ ಅಲೆ ವೇಳೆ ಲಸಿಕೆ ಪಡೆದವರ ಸಂಖ್ಯೆ ಹೆಚ್ಚಾಗಿದೆ ಎಂದು ಭೂಷಣ್ ತಿಳಿಸಿದ್ದಾರೆ. ಲಸಿಕೆ ಪರಿಣಾಮಕಾರಿಯಾಗಿದೆ ಎಂಬುದನ್ನು ಇದು ತೋರಿಸುತ್ತದೆ. ಪೂರ್ಣ ಲಸಿಕೆ ಪಡೆದವರಲ್ಲಿ ರೋಗದ ತೀವ್ರತೆ ಕಡಿಮೆ ಇದೆ. ಎರಡನೇ ಲಸಿಕೆ ಪಡೆಯದವರು ತ್ವರಿತವಾಗಿ ಲಸಿಕೆ ಪಡೆಯಬೇಕು ಎಂದವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿರುವ ಐ.ಸಿ.ಎಂ.ಆರ್. ಪ್ರಧಾನ ನಿರ್ದೇಶಕ ಡಾ. ಬಲರಾಮ್ ಭಾರ್ಗವ, ಈಗಿನ ಅಲೆಯಲ್ಲಿ ರೋಗ ತೀವ್ರತೆ ಹಾಗೂ ಸಾವುಗಳ ಪ್ರಮಾಣ ಹೆಚ್ಚಾಗಿಲ್ಲ. ಆದರೆ, ಸಹ ಅಸ್ವಸ್ಥತೆ ಹೊಂದಿರುವವರು ಆರೋಗ್ಯದ ಬಗ್ಗೆ ನಿಗಾ ವಹಿಸಬೇಕು ಎಂದಿದ್ದಾರೆ.







| | ಅಂದಾಜು | |
|---|---|---|
| ಕ್ರ.ಸಂ. | ಕಾಮಗಾರಿಯ ವಿವರ | ಮೊತ್ತ |
| 1. | ಟಿ.ವಿ. ಸ್ಟೇಷನ್ ಚೈನ್ ಲಿಂಕ್ ಬೇಲಿ, ದಂಡೆ ಬಿಗಿ ಮಾಡುವುದು, ಕಾಂಕ್ರೀಟ್ ತಡೆಗಳು, ಬಾಹ್ಯಾಲಂಕಾರ, ಸಿ.ಸಿ. ಬೆಂಚ್, ಮರ ಇತ್ಯಾದಿಗಳು, ಮೆಟ್ಟಿಲುಗಳ ನಿರ್ಮಾಣ ಮತ್ತು ಪೈಪುಗಳಿಗೆ ಹೂಳು ತಡೆಯ ಚೇಂಬರ್ ಅಳವಡಿಕೆ. | |
| 2. | ಟಿವಿ ಸ್ಟೇಷನ್ ಕೆರೆಯಲ್ಲಿ ವಿದ್ಯುತ್ ಕಂಬ ಹಾಗೂ ಭೂಗತ ವೈರಿಂಗ್ ಜೊತೆಗೆ ಎಲ್‌ಇಡಿ ಬೆಳಕಿನ ವ್ಯವಸ್ಥೆಗಳ ಅಳವಡಿಕೆ | |
| | ಒಟ್ಟಾರೆ ಮೊತ್ತ | 2,75,00,000-00 |



JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte